ಯುಗಾದಿ ವಿಶೇಷಾಂಕ

ಅಪರಂಜಿ


ಸಂಪುಟ ೬
ಏಪ್ರಿಲ್ ೧೯೮೯
ಸಂಚಿಕೆ ೧

ತಿಳಿನಗೆಯ ಕಾರಂಜಿ



- ಆನಂದ್
- ಲೀಲಾ ಮಿರ್ಲೆ
- ಆರತಿ
- ಆನಂದ್
- ಎಚ್. ಡುಂಡಿರಾಜ್
- ನಳಿನೀಪ್ರಿಯ
- ಆರ್.ಕೆ. ಲಕ್ಷ್ಮಣ್
- [illegible]
- ಶಿವು
- ಸೂಲಿಬೆಲೆ
- ಜಿ. ಎನ್. ಜಿ.
- ಜಿ.ಎಂ. ನಾಗರಾಜ

ಬಿಡಿ ಪ್ರತಿ : ಕೇವಲ ಒಂದೂವರೆ ರೂಪಾಯಿ



(ತಿಳಿನಗೆಯ ಕಾರಂಜಿ)

ಯುಗಾದಿ ವಿಶೇಷಾಂಕ

ಸಂಪುಟ ೬ | ಏಪ್ರಿಲ್ ೧೯೮೯ | ಸಂಚಿಕೆ ೭

ಚಂದಾ ವಿವರ :

ಬಿಡಿ ಪ್ರತಿ :

ಒಂದೂವರೆ ರೂಪಾಯಿ

ವಾರ್ಷಿಕ ಚಂದಾ : 15 ರೂ.

ಆಜೀವ ಚಂದಾ : 150 ರೂ.

ಪೋಷಕರು : 500 ರೂ.

ಗೌರವ ಸಲಹೆಗಾರರು :

ಶ್ರೀ ಅ. ರಾ. ಸೇ.

ಶ್ರೀ ಶೇಷಗಿರಿ

ವಿಳಾಸ :

ಅಪರಂಜಿ ಕಾರ್ಯಾಲಯ

119 [ಹಳೆಯ 36]

6ನೆಯ ಮುಖ್ಯ ರಸ್ತೆ

ಮಲ್ಲೇಶ್ವರಂ

ಬೆಂಗಳೂರು 560003

ಸಂಪಾದಕ :

ಶಿವಕುಮಾರ್

ಇಂದು ಶುಕ್ಲ ಸಂವತ್ಸರದ ಆರಂಭ. ಈ ಶುಭ ದಿನದಂದು ನಮ್ಮ ಎಲ್ಲ ಓದುಗರಿಗೆ, ಬರಹಗಾರರಿಗೆ, ಜಾಹಿರಾತುದಾರರಿಗೆ, ಹೊಸ ಸಂವತ್ಸರ ಎಲ್ಲ ರೀತಿಯಲ್ಲಿಯೂ ಮಂಗಳ ದಾಯಕವಾಗಲಿ, ಬಾಳಿನಲ್ಲಿ ಬೇವಿಗಿಂತ ಬೆಲ್ಲದ ಪಾಲೇ ಹೆಚ್ಚಿರಲಿ ಎಂದು ಅಪರಂಜಿ ಭಗವಂತನಲ್ಲಿ ಮೊರೆಯಿಡುತ್ತಾಳೆ.

' ಈಶಾವಾಸ್ಯ ಮಿದಂ ಹಾಸ್ಯಂ ' ಎಂದ ಮೇಲೆ ಅಪರಂಜಿಗೂ, ಭಗವಂತನಿಗೂ ಹಾಟ್‌ಲೈನ್ ಇರುವುದು ಖಂಡಿತ, ಅಲ್ಲವೇ !

ಈ ಸಂಚಿಕೆಯಲ್ಲಿ......

ಮುದ್ರಣ :ಇಂಪ್ರೆಷನ್ಸ್ ಪ್ರಿಂಟರ್ಸ್, ಮಲ್ಲೇಶ್ವರಂ,
ಬೆಂಗಳೂರು-560003. ದೂರವಾಣಿ : 342144

ಅ ಪ ರಂ ಜಿ

(ತಿಳಿನಗೆಯ ಕಾರಂಜಿ)

ಸಂಪುಟ ೬ ಏಪ್ರಿಲ್ ೧೯೮೯ ಸಂಚಿಕೆ ೭

ಎಲ್ಲಿ ನಿದ್ರಿಸುತ್ತಾ ಕಾಮವನ್ನು ಬಯಸುವುದಿಲ್ಲವೋ, ಕನಸನ್ನು ಕಾಣುವುದಿಲ್ಲವೋ, ಅದೇ ಸುಷುಪ್ತಿ.

— ಮಾಂಡೂಕ್ಯ

ನಿಜವಾಗಿ ಎಚ್ಚರ, ಕನಸು, ನಿದ್ದೆಗಳೆಂಬುವು ಇಲ್ಲವೇ ಇಲ್ಲ. ವ್ಯವಹಾರದಲ್ಲಿ ಇವು ಇರುವಂತೆ ಕಾಣುತ್ತವೆ. ತನಿನಿದ್ದೆಯಲ್ಲಿ ಕಾಮವೂ ಇಲ್ಲ, ಕನಸೂ ಇಲ್ಲ.

ಆದರೀಗ ಲೋಕ ವ್ಯವಹಾರದಲ್ಲಿ ಮತದಾರನು ಕಾಮಗಳನ್ನು ಬಯಸುತ್ತಲೂ, ಕನಸುಗಳನ್ನು ಕಾಣುತ್ತಲೂ ಇರುವಂತೆ ತೋರುತ್ತಿದೆ.

ನಿಜವಾಗಿ ಅವನು ಕಾಮಗಳು ದೊರಕದ, ಕನಸುಗಳು ವ್ಯರ್ಥವಾದ ಸುಷುಪ್ತಿಯಲ್ಲೇ ಇದ್ದಾನೆ. ಅವೆಲ್ಲಾ (ಎಂದರೆ ಕಾಮಗಳು, ಕನಸುಗಳು) ಅವರಿಗೇ– ಎಂದರೆ ಶ್ರೀ ಅಸಾಮಾನ್ಯರಿಗೇ – ಮೀಸಲು, ಇವನಿಗೆ ಬದನೆಕಾಯಿ ತುಂಬೇ ಮೀಸಲು. ಪ್ರತಿ ವರುಷದ ಹಾಗಲ್ಲವು ಈ ವರ್ಷದ ಬಜೆಟ್ ! ರೊಕ್ಕವು ಅವರಿಗೇ, ತೆರಿಗೆಯು ಅವರಿಗೇ, ಬಾಧದಿರಲಿ ಹಸಿವು, ಹಸಿವೂ. ಬಾರದಿರಲಿ ಹಸಿವು. ಜಯಭಾರತ!

ಅಪರಂಜಿ ಕಿಡಿ

— ಆನಂದ್

ರೈತನಿಂದ ನೇಗಿಲನ್ನು ಕೀಳಲು ಜನತಾ ಪಕ್ಷದ ಬಣಗಳೆರಡೂ ಹೋರಾಡುತ್ತಿವೆಯಂತೆ !

* * * *

ಸಲ್ಮಾನ್ ರಷ್ದೀ ವಿವಾದ ; ರಷ್ಯಾ ಮಧ್ಯಸ್ಥಿಕೆ.

— ಸುದ್ದಿ

ಸರಿ, ಶಿವಪೂಜೆಯಲ್ಲಿ ಕರಡಿ ಬಿಟ್ಟಂತೆ !

* * * *

ಸಮುದ್ರ ಪ್ರಯಾಣದ ಅಸ್ವಸ್ಥತೆ ನಿವಾರಿಸಲು ಶುಂಠಿ ಸೇವನೆ.

—ಪತ್ರಿಕೆ

ಮೇಷ್ಟರುಗಳು ಇನು ಶುದ್ದ ಶುಂಠಿ ಅಂತ ಬೈಯುವ ಹಾಗಿಲ್ಲ !

* * * *

ಕೇರಳದ ಕೊಟ್ಟಾಯಂನಲ್ಲಿ ನೂರಕ್ಕೆ ನೂರು ಅನಕ್ಷರಸ್ಥರು.

—ಸುದ್ದಿ

ಅವರಿಗೆ ಈ ಸುದ್ದಿ ಗೊತ್ತಾಗೋದು ಹೇಗೆ ?

* * * *

ಕನ್ನಡ ಸಂಘ ಸಂಸ್ಥೆಗಳು ಒಗ್ಗಟ್ಟಾಗಿ ಕೆಲಸ ಮಾಡಲು ಕರೆ.

— ದಿನ ಪತ್ರಿಕೆ

ಕ.ಸಾ.ಪ.ದ ಮೇಲ್ಪಂಕ್ತಿ ಇದೆಯಲ್ಲ ?

* * * *

ಅಕ್ಕಿಯಿಂದ ಪ್ರೋಡಕ್ಟ ತಯಾರಿಕೆ.

— ಸುದ್ದಿ

ಅಕ್ಕಿಯ ಅಭಾವ ಮರೆಯಲು ಸಾಧನವೋ ?

* * *

ಬಜೆಟ್ ಸುದ್ದಿ : 8,240 ಕೋಟಿ ರೂ. ಖೋತಾ.

ಸ್ವಿಟ್ಸರ್ಲೆಂಡಿನಿಂದ ತರಿಸಿದರಾಯಿತು !

* * * *

ಇಬ್ಬರು ಮಾಜಿ ಕೈದಿಗಳ ಸೆರೆ ; ಒಡವೆ-ವಸ್ತು ವಶ.

— ಪತ್ರಿಕೆ

ಮತ್ತೆ 'ಮಾಜಿ' ಹೇಗಾದರು ?

ಬೆಂಗಳೂರಿನಲ್ಲಿ ಒಬ್ಬ ಧಡಿಯನಿದ್ದನು
ತೂಕ ಕಳೆದು ಕೊಳ್ಳಲವನು ಪಾಡುಪಟ್ಟನು
ಘಂಟೆ ಓಟ, ಉಪ್ಪು ಬಿಟ್ಟು
ಎಣ್ಣೆ, ಬೆಣ್ಣೆ, ಎಲ್ಲ ಬಿಟ್ಟು
ಗಾಳಿ ಬೀಸ, ಮೂರ್ಖನವನು ಹಾರಿಹೋದನು.

ಉದ್ಯೋಗ ತೃಪ್ತಿ

— ಲೀಲಾ ಮಿರ್ಲೆ

ಮಾರ್ಕೆಟ್ಟಿನಲ್ಲಿ ಕಲಾ ಸಿಕ್ಕಳು. ಏನ್ ಸಮಾಚಾರ?' ಎಂದೆ. 'ಸಮಾಚಾರವಿದೆ. ನಾನು ಬ್ಯಾಂಕ್ ಕೆಲಸ ಬಿಟ್ಟೆ' ಎಂದಳು. ನನಗೆ ಆಶ್ಚರ್ಯವಾಯಿತು. ಯಾವುದೋ ಜನ್ಮದಲ್ಲಿ ಪುಣ್ಯಮಾಡಿದ್ದರೆ ಮಾತ್ರ ಸಿಗುವ ಕೆಲಸ ಅದು. ಕೈ ತುಂಬ ಸಂಬಳ, ಖುಷಿ ಟೈಮಿಂಗುಗಳು, ರಜಗಳು ನೂರಾರು ಅನುಕೂಲಗಳು. ಇವಳಿಗೇನು ಬಂತು ಅನ್ನಿಸ್ತು. ನನ್ನ ಮುಖದ ಮೇಲಿನ ಕ್ವೆಸ್ಚನ್ ಮಾರ್ಕನ್ನು ಗುರುತಿಸಿದ ಕಲಾ, "ಬ್ಯಾಂಕ್ ಕೆಲಸದಲ್ಲಿ ಅನುಕೂಲಗಳು ಬೇಕಾದಷ್ಟಿವೆ, ನಿಜ. ಆದ್ರೆ ನಂಗೇನೋ Job satisfaction ಸಿಗ್ತಾ ಇರ್ಲಿಲ್ಲ. ರೂಟೀನ್ ಕೆಲಸ ಮಾಡಿ, ಮಾಡಿ ಬೇಜಾರಾಯ್ತು. ಏನಾದ್ರೂ ಛ್ಯಾಲೆಂಜಿಂಗಾಗಿರೋ ಕೆಲಸಾನ ಮಾಡೋಣ ಅಂತ ಯೋಚಿಸ್ತಾ ಇದೀನಿ" ಎಂದಳು.

ಕಲಾಳ ಭೇಟಿಯಾದ ಕೆಲವು ದಿನಗಳ ಅನಂತರ ನಮ್ಮ ಸ್ನೇಹಿತರ ಮಗ ಬಾಬು ಮನೆಗೆ ಬಂದ. ಬಾಬು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕ. ಮೇಧಾವಿ. "ನೋಡಿ ತುಂಬ ದಿನ ಆಯ್ತು. ಅಂತೂ ಬಂದ್ಯಲ್ಲ" ಅಂದೆ. "ಬರದೆ ಏನು? ಇನ್ನು ಮೇಲೆ ದಿನಾ ಬೇಕಾದ್ರೂ ಬರಬಹುದು. ನಿಮ್ಮ ಮನೆ ಹತ್ತಿರ ಇರೋ ಶಾಲೆಯಲ್ಲಿ ಮೇಷ್ಟರ ಕೆಲಸ ಸಿಕ್ಕಿದೆ" ಅಂದ. "ಯಾಕೋ? ಏನಾಯ್ತು?" ಅಂದೆ. "ಏನೂ ಹೆದರ್ಕೋಬೇಡಿ, ಅತ್ತೆ. ಕೆಲಸದಿಂದ ಯಾರೂ ಓಡಿಸಲಿಲ್ಲ ನನ್ನ. ಮೊದಲು ಶಾಲೇಲಿ ಪಾಠ ಹೇಳಿ ಕೊಡ್ತಾ ಇದ್ದೆ. ಸಂಬಳ ಜಾಸ್ತಿ ಸಿಗುತ್ತೆ ಅಂತ ಕಾಲೇಜಿಗೆ ಸೇರಿದೆ. ಕಾಲೇಜಿನಲ್ಲಿ ಶುದ್ಧ ಅಪ್ರಯೋಜಕ. ಆ ವಯಸ್ಸಿನ ಹುಡುಗರಿಗೆ ಪಾಠ ಏನ್ ಬೇಕು ಹೇಳಿ. ಶಾಲೆಯ ಮಕ್ಕಳಿಗೆ ಹೇಳಿಕೊಡುವಾಗ ಅಧ್ಯಾಪಕನಿಗೆ ಸಿಗೋ ಉದ್ಯೋಗ ತೃಪ್ತಿ ಕಾಲೇಜು ಮೇಷ್ಟ್ರಿಗೆ ಚೂರೂ ಸಿಗಲ್ಲ" ಅಂದ.

ಇದು ಒಳ್ಳೆ Job satisfaction. ನನಗೆ ಇದರ ತಲೆ ಬುಡ ಅರ್ಥವಾಗಲಿಲ್ಲ. ಹೇಗೆ ಸಾಧ್ಯ ಅನ್ನಿ. ಜಾಬ್ ಇದ್ದರಲ್ಲವೆ ಅದರ ತೃಪ್ತಿ, ಅತೃಪ್ತಿ ತಿಳಿಯೋದು? ನನ್ನ ಉದ್ಯೋಗ ಮನೆ ಕೆಲಸ. ಒಂದು ರೀತಿಯಲ್ಲಿ ಮನೆ ಕೆಲಸ

ಒಂದು ಅಪೂರ್ವವಾದ ಉದ್ಯೋಗವೆಂದೇ ಹೇಳಬೇಕು. ಈ ಉದ್ಯೋಗವನ್ನು ಹಿಡಿದವರು ಮೊದಲನೆಯ ದಿನದಿಂದಲೂ ಪೂರ್ಣ ಅತೃಪ್ತಿ ಇದ್ದರೂ ಸಾಯುವ ತನಕ ಇದನ್ನು ಬಿಡುವುದಿಲ್ಲ. ಕಾರಣ ಸಿಂಪಲ್ಲು. ಬಿಡುವ ಹಾಗೇ ಇಲ್ಲ, ಅಷ್ಟೆ !

ಆಯ್ತು. ನಾನು, ನನ್ನ ಮನೆ ಕೆಲಸ. ಹೋಗಲಿ. ಅಮೇರಿಕದ ನತದೃಷ್ಟ ಮಹಿಳೆಯರಂತೆ ಎಲ್ಲ ಕೆಲಸವನ್ನೂ ನಾವೇ ಮಾಡಬೇಕಾಗಿಲ್ಲವಲ್ಲ. ಕೆಲಸಕ್ಕೆ ಇನ್ನೂ ಸಹ ಕೆಲಸದವರು ಸಿಗುತ್ತಾರೆ ಅಂತ ಮೊನ್ನೆ ತನಕ ಸಂತೋಷವಾಗಿದ್ದೆ. ಮೊನ್ನೆ ನಮ್ಮ ಕೆಲಸದ ಟೀನೇಜರ್ ಲಕ್ಷ್ಮಿ ಲೇಟಾಗಿ ಬಂದಾಗ, "ಏಕಮ್ಮ, ಇಷ್ಟು ಲೇಟು. ದಿನಾ ಹೀಗೆ ಬರ್ತಾ ಇದ್ರೆ, ಬೇರೆ ಯಾರನ್ನಾದ್ರೂ ನೋಡ್ಕೋತೀನಿ" ಎಂದೆ. "ಸರಿಯಮ್ಮ, ನೋಡ್ಕೊಳಿ. ಮೊದಲನೆ ತಾರೀಖಿನ ತನಕ ಕೆಲಸ ಮಾಡಲೋ, ಅಥವ ನಾಳೆಯಿಂದಾನೆ ನಿಲ್ಲಿಸಲೋ ?" ಎಂದ್ಳು. ಹೇಗೋ ತಿರುಗಾ ಮುರುಗಾ ಮಾತಾಡಿ, ನನ್ನ ಮರ್ಯಾದೆನೂ ಉಳಿಸಿಕೊಂಡು, ಅವಳನ್ನೂ ಕಳೆದುಕೊಳ್ಳದಂತೆ ಮಾತನಾಡಿ ಬಚಾವಾದೆ. ಲಕ್ಷ್ಮಿಗೆ ಒಳ್ಳೆ ಸಂಬಳ, ಊಟ. ಬಟ್ಟೆ ಎಲ್ಲಾ ಕೊಟ್ರೂ, ಏಕೆ ಬಿಡ್ತೀನಿ ಅಂದ್ಳು ಅಂತ ನನಗೆ ಅರ್ಥವಾಗಲಿಲ್ಲ. ದಿನವೆಲ್ಲಾ ಯೋಚನೆ ಮಾಡಿದೆ. ಪಟಕ್ಕನೆ ಹೊಳೀತು— ಮುಕ್ಕಾಲು ಪಾಲು ಇವಳಿಗೆ Job satis-faction ಇಲ್ವೋ, ಏನೋ ಅನ್ನಿಸ್ತು. ಅಂದರೆ ಅವಳ ಸ್ವಭಾವಕ್ಕೆ ಅವಶ್ಯಕವಾದ ಯಾವುದೊ ಅಂಶಗಳು ನನ್ನಲ್ಲಿ ಅಥವ ನಮ್ಮ ಮನೆಯಲ್ಲಿ ಇಲ್ಲ. ಅದೇನೆಂದು ಪತ್ತೆ ಮಾಡುವುದು ಕಷ್ಟವಾಗಲಿಲ್ಲ. ಲಕ್ಷ್ಮಿ ಮಾತುಗಾರ್ತಿ. ಸಮಯ ಸಿಕ್ಕಾಗಲೆಲ್ಲ ನನ್ನ ಹತ್ತಿರ ಹರಟಲು ಪ್ರಯತ್ನಿಸುತ್ತಿದ್ದಳು. ನನಗೆ ಬೆಳಗ್ಗೆ ಪೀಕ್ ಅವರ್ ನಲ್ಲಿ ಇವಳ ಜೊತೆ ಸರಸ ಸಲ್ಲಾಪ ಮಾಡುವ ವ್ಯವಧಾನವೆಲ್ಲಿ ಬರಬೇಕು ?

ಅವಳ ಮನೆ ಹತ್ತಿರ ಒಬ್ಬರ ಮನೆಯಲ್ಲಿ ಟಿ.ವಿ. ಇದೆಯಂತೆ. ಇವಳ ಮನೆಯವರೆಲ್ಲಾ ಅಲ್ಲಿಗೆ ಹೋಗಿ ಮನೆಯವರು ಟೀವಿ ಆರಿಸುವ ತನಕ ಅಲ್ಲಿದ್ದು ಬರುವುದನ್ನು ಹಿಂದೆ ಹೇಳಿದ್ದಳು. ನನ್ನ ತಪ್ಪನ್ನು ತಿದ್ದಿಕೊಳ್ಳಲು ಮಾರನೆಯ ದಿನ ಕಾಫಿ ಬೆರೆಸುತ್ತಾ ಅವಳ ಅತಿ ಪ್ರಿಯವಾದ ಟಾಪಿಕ್ ಎತ್ತಿದೆ. "ಲಕ್ಷ್ಮಿ, ನಿನ್ನೆ ಚಿತ್ರ ಮಂಜರಿ ನೋಡದ್ಯಾ ?" ಎಂದೆ. ಲಕ್ಷ್ಮಿಯ ಮುಖ ಅರಳಿತು. "ಹೌದಮ್ಮ, ನಿನ್ನೆ ಹಾಡುಗಳು ತುಂಬ ಚೆನ್ನಾಗಿದ್ವು. ಉದಯರಾಜ್ ಎಷ್ಟು ಚೆನ್ನಾಗಿ ಡ್ಯಾನ್ಸ್ ಮಾಡ್ತಾನೆ ಅಲ್ವಾ ?" ಎಂದಳು. ಅವಳನ್ನು ಸಂತೋಷವಾಗಿ ಇಟ್ಟಿರುವುದೇ ನನ್ನ ಜೀವನದ ಗುರಿ ಎನ್ನುವುದನ್ನು ನೆನಪಿನಲ್ಲಿ ಇಟ್ಟುಕೊಂಡು, ನಾನು ಮುಖದಲ್ಲಿ ಹರ್ಷವನ್ನು ಸೂಸುತ್ತಾ ಎಂದೂ ಕಾಣದ ಉದಯರಾಜನ ಕುಣಿತವನ್ನು ಕೊಂಡಾಡಿದೆ.

ಹೀಗೆ ಟಿ.ವಿ. ಕಾರ್ಯಕ್ರಮಗಳ ವಿಮರ್ಶೆ, ಲಕ್ಷ್ಮಿಯ ಪಕ್ಕದ ಮನೆಯ ಹೆಂಗಸು ಗಂಡನನ್ನು ಬಿಟ್ಟು ಓಡಿ ಹೋದ ಬಿಸಿ ಸುದ್ದಿ, ಇವಳು ಕೆಲಸ ಮಾಡುವ ಇನ್ನೊಂದು ಮನೆಯ ಯಜಮಾನ ಕುಡಿದು, ಮೆಟ್ಟಿಲಿನ ಮೇಲಿಂದ ಬಿದ್ದು ಪೆಟ್ಟು ಮಾಡಿಕೊಂಡಿದ್ದು, ಹಿಂದಿನ ಬೀದಿಯಲ್ಲಿ ಕಡಲೆಕಾಯಿ ಮಾರುವ ಮುದುಕಿಯ ದನ ತಪ್ಪಿಸಿಕೊಂಡು ಹೋಗಿದ್ದು, ಇತ್ಯಾದಿ ನಾನಾ ವಿಷಯಗಳನ್ನು ಹೇಳುತ್ತಾ ನನ್ನ ಸಾಮಾನ್ಯ ಜ್ಞಾನವನ್ನು ವಿಸ್ತರಿಸುತ್ತಿದ್ದಾಳೆ ನಮ್ಮ ಕೆಲಸದವಳು. ಅವಳು ಈಚೆಗೆ ಬಲು ಶ್ರದ್ಧೆಯಿಂದ ಕೆಲಸ ಮಾಡುವುದನ್ನು ನೋಡಿದರೆ, ಖಂಡಿತ ಅವಳಿಗೆ Job satisfaction ಸಿಕ್ಕಿದೆ ಅನ್ನಿಸುತ್ತೆ.

ಆದರೆ ಬೆಳಗಾದರೆ ಇವಳ ಲೆಕ್ಚರ್ ಕೇಳುವ ಶಿಕ್ಷೆಯನ್ನು ಅನುಭವಿಸಬೇಕಾದ ನನಗೆ, ನನ್ನ ಜಾಬಿನಲ್ಲಿ ಪೂರಾ Dissatisfaction ಶುರುವಾಗಿದೆ. ಸಂಬಳ ವಿಲ್ಲದ ಕೆಲಸಗಳಿಗೆ ಉದ್ಯೋಗ ತೃಪ್ತಿ ಅನ್ವಯಿಸುವುದಿಲ್ಲ ಅಂತೀರಾ ?



"ಅಯ್ಯೋ ! ನನ್ನ ಗಂಡ ಅಂದ್ಕೊಂಡು ಹೊಡ್ದು ಬಿಟ್ಟೆ"

ಯಾರು, ಯಾರಿಗೆ ಯಾ ಯಾರ ಬಗ್ಗೆ ಹೇಳಿದರು ?

—ಆರತಿ

---

೧. ಬಲು ಹಸಿದು ಬಾಯಾರಿ ಬಳಲಿ ಮಲಗಿಹಳೆಲ್ಲೋ...

ಅ) ಸೋನಿಯಾ ಗಾಂಧಿ, ಮೇನಕಾ ಗಾಂಧಿಯ ಬಗ್ಗೆ.

ಆ) ದೇವರು, ಭಾರತ ಮಾತೆಯ ಬಗ್ಗೆ.

ಇ) ನಳ, ದಮಯಂತಿಯ ಬಗ್ಗೆ.

೨. ಇದು ಯಾರು ನನ್ನ ಕಣ್ಣೆದುರಿಗೇ ತಿನ್ನುತ್ತಿರುವ ದುಷ್ಟ. ಅವನನ್ನ ಯಮಲೋಕಕ್ಕೆ ಕಳಿಸಿಬಿಡುತ್ತೇನೆ.

ಅ) ಫೋತೇದಾರ್, ಆರ್. ಕೆ. ಧವನ್ ಬಗ್ಗೆ.

ಆ) ಗೌಡರು, ಬಿ. ಡಿ. ಎ. ಅಧ್ಯಕ್ಷರ ಬಗ್ಗೆ.

ಇ) ಬಕಾಸುರ, ಭೀಮನ ಬಗ್ಗೆ.

೩. ನೀವೈದು ಜನರೂ ಹಂಚಿಕೊಳ್ಳಿ.

ಅ) ವಾಣಿಜ್ಯ ತೆರಿಗೆ ಅಧಿಕಾರಿ, ತನ್ನ ಐದು ಸಿಬ್ಬಂದಿಗಳಿಗೆ.

ಆ) ಹೆಗಡೆ, ಐದು N. R. I. ಗಳಿಗೆ.

ಇ) ಕುಂತಿ, ಪಾಂಡವರಿಗೆ.

೪. ನೀನು ಯಾರು, ಹೇ ಸುಂದರಿ ?

ಅ) ಎಚ್. ಕೆ. ಎಲ್. ಭಗತ್, ಶಬಾನಾ ಅಜ್ಮಿಯನ್ನು ಕುರಿತು.
(ಫಿಲ್ಮ್ ಫೆಸ್ಟಿವಲ್ ಉದ್ಘಾಟನಾ ಸಮಾರಂಭದಲ್ಲಿ.)

ಆ) ವ್ಯಾಪಾರಿ. ಫೂಲನ್‌ದೇವಿ ಇದಿರು ನಿಂತಾಗ.

ಇ) ಶಂತನು ಮಹಾರಾಜ, ಗಂಗೆಯನ್ನು ಕುರಿತು.

೫. ಸೂರ್ಯನ ಹಾಗೆ ತೇಜಸ್ವಿ. ಬುದ್ಧಿಯಲ್ಲಿ ಬೃಹಸ್ಪತಿ. ತಾಳ್ಮೆಯಲ್ಲಿ ಭೂಮಿ, ಶೌರ್ಯದಲ್ಲಿ ಮಹೇಂದ್ರ.

ಅ) ಸೀತಾರಾಮ ಕೇಸರಿ, ರಾಜೀವ್ ಗಾಂಧಿಯ ಬಗ್ಗೆ.

ಆ) ಬೊಮ್ಮಾಯಿ, ರಾಮಕೃಷ್ಣ ಹೆಗಡೆ ಬಗ್ಗೆ.

ಇ) ನಾರದ ಮುನಿ, ಸತ್ಯಭಾಮನ ಬಗ್ಗೆ.

೬. ಈ ಪಾಪಿಯ ಎದೆಯನ್ನು ಬಗೆದು ಅವನ ರಕ್ತವನ್ನು ಹೀರುತ್ತೇನೆ.

ಅ) ಆಯಾತುಲ್ಲಾ ರಹಾವುಲ್ಲಾ ಖೊಮೇನಿ, ಸಲ್ಮಾನ್ ರಷ್ದಿಯ ಬಗ್ಗೆ.

ಆ) ಆರ್. ಕೆ. ಹೆಗಡೆ, ಸುಬ್ರಮಣ್ಯನ್‌ಸ್ವಾಮಿಯ ಬಗ್ಗೆ.

ಇ) ಭೀಮಸೇನ, ದುಃಶ್ಯಾಸನನ ಬಗ್ಗೆ.

೭. ಮುಂದೇನೇ, ಸಖಿ, ಮುಂದೇನೇ ?

ಅ) ಮಾರ್ಗರೇಟ್ ಆಳ್ವ, ಪಿ. ಟಿ. ಉಷಾಳನ್ನು ಕುರಿತು,

ಆ) ರಾಜೀವ್ ಗಾಂಧಿ, ತಮ್ಮ ಪತ್ನಿಯನ್ನು ಕುರಿತು.

ಇ) ಸಖಿ, ರಾಧೆಯನ್ನು ಕುರಿತು.

೮. ಕಾಗೆಯುಂ ಕೋಗಿಲೆಯುಂಪೊಂದೇ ಮೇಲ್ನೋಟಕ್ಕೆ.

ಅ) ಜ್ಯೋತಿ ಬಸು, ಡಾರ್ಜಿಲಿಂಗ್ ವಿದ್ಯಮಾನದ ಬಗ್ಗೆ.

ಆ) ರೇಖಾ, ಶ್ರೀದೇವಿ ಬಗ್ಗೆ.

ಇ) ಮಂಕು ತಿಮ್ಮ ಉವಾಚ.

೦—೦

11

ದಂತ ಕಥೆ!

— ಆನಂದ್

ಡಾಕ್ಟರ ಹತ್ರ ಹೋಗೋದು ಅಂದ್ರೆ ನನಗೆ ಪ್ರಾಣ ಭಯ! ಅದರಲ್ಲೂ ದಂತ ವೈದ್ಯರು ಅಂದರೆ 'ಬಿರುಗಾಳಿಯಲ್ಲಿ ತರಗೆಲೆ'ಯಂತೆ ನಡುಗುತ್ತೀನಿ ನಾನು. ದಂತವೈದ್ಯರು ಅಂತ ಬೋರ್ಡ್ ನೋಡಿದರೇ ಸಾಕು ನನಗೆ ಯಾವುದೋ ಅವ್ಯಕ್ತ ಭಯ! ಎಷ್ಟೋ ಸಲ ದೇವಸ್ಥಾನಕ್ಕೆ ಹೋದಾಗ 'ಏನಾದರೂ ಆಗಲಿ, ದಂತ ವೈದ್ಯ ದರ್ಶನ ಯೋಗ ನನ್ನ ಭಾಗ್ಯಕ್ಕೆ ಬರದಿರಲಿ ದೇವಾ' ಅಂತ ಬೇಡಿಕೋತೀನಿ. ಆದರೆ ಆ ದಯಾಮಯನಾದ ಭಗವಂತನಿಗೆ ನನ್ನ ಪ್ರಾರ್ಥನೆಗಳು ಕೇಳಲಿಲ್ಲ ಅಂತ ಕಾಣುತ್ತೆ! ಅಥವಾ ಅವನ ಸಾವಿರಾರು ಗೋಳುಗಳಲ್ಲಿ ನನ್ನದೇನು ಮಹಾ ಅಂತ ಇದ್ದ ಅಂತ ಕಾಣುತ್ತೆ. ನನಗೆ ಅಸಾಧ್ಯವಾದ ಹಲ್ಲು ನೋವು ಬಂತು. ಕ್ರೋಸಿನ್ನು, ನೊವಾಲ್ಜಿನ್‌ಗಳಿಗೆ ಜಗ್ಗಲಿಲ್ಲ. ಅಜ್ಜಿ ಲವಂಗ ಇಟ್ಟುಕೊಳ್ಳೋ ಅಂತ ಸಲಹೆ ಮಾಡಿದಳು. ಆದರೆ ನೋವು ಜಾಸ್ತಿ ಆಗ್ತಾನೇ ಇತ್ತು! ಸರಿ, ಇನ್ನೇನು ಮಾಡೋದು ಅಂತ ಮನೇ ಹತ್ರ ಇರೋ ದಂತವೈದ್ಯರಿಗೆ ಫೋನ್ ಮಾಡಿದೆ. ಅವರ ಸೆಕ್ರೆಟರಿ ಅಂತ ಕಾಣುತ್ತೆ. ಇನ್ನು ಎರಡು ವಾರ ಯಾರ ಅಪಾಯಿಂಟ್‌ಮೆಂಟೂ ಕೊಡೋ ಹಾಗಿಲ್ಲ! ಆಮೇಲೆ ಬರ್ತೀರಾ?' ಅಂದರು. 'ತಾಯೀ, ನಾನು ಅಲ್ಲೀವರೆಗೂ ಬದುಕಿರೋದು ಅಸಂಭವ' ಅಂತ ಹೇಳಿ ಫೋನ್ ಕುಕ್ಕಿದೆ. ಅಷ್ಟು ಹೊತ್ತಿಗೆ ದೇವರು ಬಂದ್ಹಾಗೆ ರವಿ ಬಂದ. ನನ್ನ ಖಾಸಾ ಗೆಳೆಯ. ಅವನಿಗೆ ಒಬ್ಬರು ಡೆಂಟಿಸ್ಟು ಗುರುತಿದ್ದರು. ಅವರ ಹತ್ರ ಹೋದೆವು.

ಅವರ ವೈಟಿಂಗ್ ರೂಂನಲ್ಲಿ ಕಾದಿದ್ದರು, ಹಲವು ನತದೃಷ್ಟರು. ರವಿಯ ದೆಸೆಯಿಂದ ನನ್ನ, ಅರ್ಜೆಂಟ್ ಕೇಸ್ ಅಂತ ಒಳಗೆ ದಬ್ಬಿದರು. ಭವ್ಯವಾದ ಆಫೀಸು. ಮಧ್ಯೆ ಒಂದು ಸ್ಪೆಷಲ್ ದಂತ ಸಿಂಹಾಸನ. ಅದಕ್ಕೆ ಹಲವಾರು ಸಾಧನಗಳನ್ನ ಅಳವಡಿಸಿದ್ದರು. ಮೇಲಿಂದ ಪ್ರಖರವಾದ ದೀಪ. ಇದೆಲ್ಲ ನೋಡಿ ನನ್ನ ಎದೆ ಜಗ್ ಅಂತು. ರವಿಗೆ ಹೇಳಿದೆ ಈಗ ನೋವು ಕಮ್ಮಿ ಆಗ್ತಿದೆ, ಹೊರಟು ಹೋಗೋಣ ಅಂತ. ಆದರೆ ಅವನು ಒಪ್ಲಿಲ್ಲ. ಅಷ್ಟರಲ್ಲಿ ವೈದ್ಯರೇ ಒಳಕೊಠಡಿ ಇಂದ ಬಂದರು. ನಾನು ಅಪರಾಧಿಯಂತೆ ಕುರ್ಚೀಲಿ ಕೂತೆ. ರವಿ ನಗ್ತ ನಿಂತಿದ್ದ. ವೈದ್ಯರು ಗಂಭೀರವಾಗಿ 'ಬಾಯಿ ಬಿಡಿ!' ಅಂದರು. ನನ್ನ ದಂತಾವಳಿಯನ್ನ ನೋಡಿ 'ತ್ಚು, ತ್ಚು!' ಅಂದರು. 'Last check up ಯಾವಾಗ ಆಗಿತ್ತು?' ಅಂದ್ರು. ನಾನು ಹೇಗೆ ಹೇಳಲಿ, ಇದುವರೆಗೂ ಯಾವ ದಂತ ವೈದ್ಯರ ಹತ್ತಾ ನೂ

ಹೋಗಿಲ್ಲ ಅಂತ! ಮರೆತು ಹೋಗಿದೆ' ಅಂದೆ. 'Big cavity! What a pity!' ಅಂತ ಪ್ರಾಸಬದ್ಧವಾಗಿ ನುಡಿದರು. 'ನೋಡಿ, ಈ ಹಲ್ಲು ನಾಶ ವಾಗಿದೆ. ಅದನ್ನ ಕೀಳೋದೇ ಮಾರ್ಗ!' ಅಂದರು. ನನ್ನ ಪಕ್ಕದಲ್ಲೇ ಸಾಲಾಗಿ ಸುತ್ತಿಗೆ, ಉಳಿ, ಇಕ್ಕಳಗಳನ್ನು ಇಟ್ಟಿದ್ದರು. ಅವನ್ನ ನೋಡಿ ಬೆದರಿದೆ. ಡಾಕ್ಟರು ಒಂದು ಸಿರಿಂಜಿನಲ್ಲಿ Local anaesthesia ತುಂಬಿ, ದವಡೆಗೆ ಚುಚ್ಚಿದರು, ಹಾ, ಹೂ ಅನ್ನೋದ್ರಲ್ಲಿ ನನ್ನ ನೋವು ಮಾಯ! 'ಡಾಕ್ಟ್ರೆ, ಈಗ ನೋವಿಲ್ಲ. ನಾಳೆ ಬರ್‍ತೀನಿ' ಅಂತ ಗೋಗರೆದೆ. ವೈದ್ಯರು ನಕ್ಕರು. Don't be silly! ಅಂದು, ಇಕ್ಕಳ ಕೈಗೆ ತಗೊಂಡರು. ನಾನು ವ್ಯಾಘ್ರವನ್ನು ಕಂಡ ಹುಲ್ಲೆಯಂತೆ ಬೆದರಿದೆ. 'ಈ ಇಕ್ಕಳ ನನ್ನ ಹಲ್ಲು ಕೀಳುತ್ತಾ? ಅಂತ ಕೇಳಿದೆ. 'ಇಲ್ಲ, ನಾನು ಕಿತ್ರೇ ಅದು ಕೀಳೋದು!' ಹಲ್ಲುನೋವಿನ ಯಾತನೆ ಜತೇಗೆ ಅವರ ಜೋಕು ಬೇರೆ. ಸುಮ್ಮನಾಗಿ ಕುಳಿತೆ ಡಾಕ್ಟರು ಹೇಳಿದರು : 'ನೋಡಿ, ಭಯಕ್ಕೆ ಕಾರಣ ಇಲ್ಲ! ಮುಂದೆ ಬೋರ್ಡು ನೋಡಿ' ಅಂದರು. ಆ ಬೋರ್ಡಿನಲ್ಲಿ 7682 ಅಂತಿತ್ತು, ಡಾಕ್ಟರು ನಾನು ಕಿತ್ತಿರೋ ಹಲ್ಲುಗಳ ಸಂಖ್ಯೆ ಅದು! ಈಗ ಧೈರ್ಯ ಬಂತೆ? ಅಂದರು, ಸರಿ 83 ಮಾಡೋ ಭಾಗ್ಯ ನಂದು ಅನ್ಕೊಂಡೆ.

ಅಂತೂ ಹಲ್ಲು ಕೀಳುವ ಪ್ರಕರಣ ಮುಗೀತು. ಡಾಕ್ಟರು ಕೊಟ್ಟ ಔಷಧಿ ಚೀಟಿ ತಗೊಂಡು ಹೊರಟೆವು. ಇನ್ನೂ ಕಾಯುತ್ತಿದ್ದ ರೋಗಿಗಳ ಮುಂದೆ ಬಹಳ ಧೈರ್ಯವಂತನಂತೆ ಗಂಭೀರವಾಗಿ ನಡೆದೆ ಅನ್ನಿ!

ಇದೆಲ್ಲ ನಡೆದು ಮೂರು ತಿಂಗಳಾಗಿವೆ, ಇಷ್ಟು ಹೊತ್ತಿಗೆ ಗಾವಸ್ಕರ್ ಸ್ಕೋರ್ ತರಹ ಆ ಬೋರ್ಡಿನ ಸಂಖ್ಯೆ ಹತ್ತು ಸಾವಿರ ಮೀರಿರಬಹುದೆ?

ಮಹಿಳೆಯರೊಂದಿಗೆ ವಾದ ಮಾಡಿ ಗೆಲ್ಲಲು ಎರಡು ಮಾರ್ಗಗಳಿವೆ.

ದುರದೃಷ್ಟಕರವೆಂದರೆ ಈ ಮಾರ್ಗಗಳು ನಮಗೂ ತಿಳಿಯದು.

ಯಶಸ್ವಿ ದಾಂಪತ್ಯ

—ಎಚ್. ಡುಂಡಿರಾಜ್

ಪತ್ರಿಕೆಗಳಲ್ಲಿ ಬರುತ್ತದೆ ಆಗಾಗ
ದಂಪತಿಗಳ ಭಾವಚಿತ್ರ
ಇಬ್ಬರ ಮುಖದಲ್ಲೂ ನಗು
ಬಹುಶಃ ಚಿತ್ರದಲ್ಲಿ ಮಾತ್ರ

ಇಪ್ಪತ್ತೈದು ವರ್ಷ ಒಟ್ಟಿಗೆ
ಬದುಕಿದ್ದರಂತೆ ಅಬ್ಬ !
ನಿಜಕ್ಕೂ ದೊಡ್ಡ ಸಾಹಸ
ನಡೆಸಲೇ ಬೇಕು ಹಬ್ಬ

ಅಂಥವರೊಬ್ಬರು ಸಿಕ್ಕಾಗೊಮ್ಮೆ
ಕೇಳಿದೆ ಅವರ ಹತ್ರ—
"ನಿಮ್ಮದು ಯಶಸ್ವಿ ದಾಂಪತ್ಯವಂತೆ
ಯಾವುದು ಅದರ ಸೂತ್ರ ?"

ನಕ್ಕು ನುಡಿದರು —"ಬಹಳ ಸರಳ
ಯಶಸ್ವಿ ದಾಂಪತ್ಯದ ಗುಟ್ಟು.
ಹೆಂಡತಿ ಏನೇ ಹೇಳಲಿ
ನೀ ಸುಮ್ಮನೆ ಹೂಂ ಗುಟ್ಟು"

ಬೆಂಗಳೂರು ಇಂದು

— ನಳಿನೀಪ್ರಿಯ

ಭಾರತದ ರಾಮಾಯಣ

ಭಾನುವಾರ ಸಂಜೆ ಮನೆಯಲ್ಲಿ ಕೂತಿದ್ದಾಗ ಗೋಪಿ ಒಳಗೆ ಬಂದ.

"ಹೇಗಿದ್ದೀಯಾ ಮಿತ್ರ ಶ್ರೀ ? ಗೋಪಿಯ ಮೊದಲ ಪ್ರಶ್ನೆ.

"ಇದೇನೋ ಇದು, ಯಾವಾಗಿನಿಂದ ಈ ಶ್ರೀ ಶುರು ಮಾಡಿದೆ ?" ನಾನು ಕೇಳಿದೆ. "ಯಾಕೆ ಹೇಳ್ತೀಯಾ ಗುರು. ಟಿ. ವಿ. ನಲ್ಲಿ ಈ ಮಹಾಭಾರತ ಶುರುವಾದಾಗಿನಿಂದ ಮನೆಯಲ್ಲಿ ಎಲ್ಲರ ಬಾಯಲ್ಲೂ ಈ ಮಾತೇ ಭೀಷ್ಮನ ತಾತ್ ಶ್ರೀ, ಗಾಂಧಾರೀನ ದೀದಿ ಶ್ರೀ, ಶಕುನೀನ ಜೀಜಾ ಶ್ರೀ, ಇವೆಲ್ಲಾ ಕೇಳಿ ಮಕ್ಕಳೆಲ್ಲಾ ಅಪ್ಪಾ ಶ್ರೀ, ಅಮ್ಮಾ ಶ್ರೀ ಅಂತ ಪ್ರಾರಂಭಿಸಿಬಿಟ್ಟಿವೆ. ಅಷ್ಟೇಕೆ ನನ್ನ ಹೆಂಡ್ತಿ ಕೂಡ ರೋಹಿಣೀನ ಸೋಸೆ ಶ್ರೀ ಅಂತ ಕರೆಯುಕ್ಕೆ ಶುರುಮಾಡಿದಾಳೆ. ನನಗಂತೂ ತಲೆ ಚಿಟ್ಟು ಹಿಡಿದುಹೋಗಿದೆ" ಅಂತ ತನ್ನ ಅಳಲನ್ನ ತೋಡಿಕೊಂಡ. "ಯೋಚನೆ ಮಾಡಬೇಡ. ಎಲ್ಲಾ ಸರಿಹೋಗುತ್ತೆ, ಗೋಪಿ ಶ್ರೀ" ಅಂತ ಸಮಾಧಾನ ಮಾಡಿದೆ,

ಸೇಲ್ಸ್ ಗರ್ಲ್ಸ್

ಕೆಲವು ದಿನಗಳ ಹಿಂದೆ ಭುಜಂಗ ಮತ್ತು ಅವನ ಭಾರ್ಯೆ ಪಾರ್ವತಮ್ಮ ನಮ್ಮ ಮನೆಗೆ ಬಂದಿದ್ದರು. ಅದೂ ಇದೂ ಹರಟ್ತಾ ಕೂತಿದ್ವಿ. ಮಾತು ಮಧ್ಯಾಹ್ನದ ಹೊತ್ತು ಬಾಗಿಲ ಬೆಲ್ ರಿಂಗ್ ಮಾಡಿ ಗೋಳಿಡುವ ಸೇಲ್ಸ್ ಗರ್ಲ್ಸ್ ಕಡೆ ಹೊರಳಿತು.

"ಅಲ್ಲಾ ಮನೆ ಕೆಲಸ ಎಲ್ಲಾ ಮುಗಿಸಿ, ಪಾತ್ರೆ ಎಲ್ಲಾ ತೊಳೆಯುಕ್ಕೆ ಹಾಕಿ, ರಾಮಾ, ಕೃಷ್ಣಾ ಅಂತ ಎರಡು ಘಳಿಗೆ ನಿದ್ರೆ ಮಾಡೋಣ ಅಂದ್ರೆ, ಟ್ರಿ,,ಣ್ ಅಂತ ಬೆಲ್ ಮಾಡುತ್ವೆ ಈ ಹುಡುಗೀರು. ಬಾಗಿಲು ತೆಗೆದರೆ ಸಾಕು, 'ಆಂಟಿ ಈ ಸೋಪು ತೊಗೊಳ್ಳಿ, ಆ ಪೌಡರ್ ತೊಗೊಳ್ಳಿ ಅಂತ ಪೀಡಿಸುಕ್ಕೆ ಶುರು ಹಚ್ಚಿದರೆ ಬಡಪೆಟ್ಟಿಗೆ ಬಿಡೋಲ್ಲ ನೋಡಿ. ನಾನೂ ಎಷ್ಟೋ ಸಲ ಹೇಳಿದೆ. ನನಗೇನೂ ಬೇಡಾಮ್ಮಾ

ಮಧ್ಯಾಹ್ನ ಸ್ವಲ್ಪ ನಿದ್ದೆ ಮಾಡೋಕ್ಕೆ ಬಿಡಿ. ಅಂತ. ಕೇಳಬೇಕಲ್ಲ. ಪ್ರತಿ ಮಧ್ಯಾಹ್ನನೂ ಒಬ್ಬರಲ್ಲ ಒಬ್ಬರು ಹಾಜರ್. ಏನ್ಮಾಡೋದೂ ಅಂತ್ಲೇ ತೋಚ್ತಾ ಇಲ್ಲಾರೀ, ಪಾರ್ವತಮ್ಮ !" ನನ್ನ ಪತ್ನಿ ತನ್ನ ಲೇಟೆಸ್ಟ್ ಸಮಸ್ಯೇಗೆ ಬ್ರೇನ್ ಸ್ಟಾರ್ಮಿಂಗ್ ಸೆಷನ್ ಪ್ರಾರಂಭಿಸೇ ಬಿಟ್ಲು.

ಪಾರ್ವತಮ್ಮ ಸಮಾಧಾನವಾಗಿಯೇ ಉತ್ತರಿಸಿದರು.

"ನೋಡಿ, ಪಂಕಜ, ಕೆಲವು ತಿಂಗಳ ಹಿಂದೆ ನನಗೂ ಇದೇ ಒಂದು ಭಾರಿ ಸಮಸ್ಯೆ ಆಗಿ ಬಿಟ್ಟಿತ್ತು. ಹೇಗಾದ್ರೂ ಮಾಡಿ ಪರಿಹಾರ ಕಂಡು ಹಿಡೀಲೇ ಬೇಕು ಅಂತ ಇವರ್ನ ಕೇಳ್ದೆ. ಒಂದೊಳ್ಳೇ ಉಪಾಯ ಹೇಳಿದ್ರಮ್ಮ. ಆಗಿನಿಂದ ಮಧ್ಯಾಹ್ನದ ಹೊತ್ತು ನಿರಾಳವಾಗಿ ನಿದ್ದೆ ಮಾಡ್ತಿದೀನಿ."

"ಏನುಪಾಯಾರೀ ಅದು ? ನನ್ಗೂ ತಿಳ್ಸಿ ಸ್ವಲ್ಪ ಪುಣ್ಯ ಕಟ್ಟಿಕೊಳ್ರಿ."

"ಬಹು ಸುಲಭಾರೀ ಅದು. ಉಪಾಯ ತಿಳಿದ ದಿನದಿಂದ ಒಂದು ವಾರದ ಕಾಲ ಮಧ್ಯಾಹ್ನ ಊಟವಾದ ತಕ್ಷಣ, ಹಣೆ ತುಂಬಾ ಕುಂಕುಮ ಇಟ್ಕೊಂಡು ಕೂದಲನ್ನೆಲ್ಲಾ ಬಿಚ್ಕೆ, ಈ ಹುಡುಗೀರಿಗೋಸ್ಕರಾನೇ ಕಾದಿರ್ತಿದ್ದೆ. ಬೆಲ್ ಆದ ತಕ್ಷಣ, ಬಾಗಿಲು ತೆಗೆದು,

"ಬಾಮ್ಮಾ ಬಾ. ಸರಿಯಾದ ಸಮಯಕ್ಕೆ ಬಂದೆ ತಾಯಿ. ಪೂರ್ಣಾ ಹುತೀಗೆ ನಮ್ಮೆಜಮಾನ್ರು ಕಾಯ್ತಾ ಇದ್ದಾರೆ. ಒಂದೇ ಒಂದು ನಿಮಿಷ ದೇವರ ಮನೇಗೆ ಬರ್ತೀಯಾಮ್ಮಾ ?" ಅಂತ ತೀರಾ ನಯವಾಗಿ ಕೇಳ್ತಿದ್ದೆ.

"ಟೈಮಿಲ್ಲ ಆಂಟಿ, ಇನ್ನೊಮ್ಮೆ ಬರ್ತೀನಿ" ಅಂತ ಹೇಳಿ ದೌಡಾಯಿಸಿ ಬಿಡ್ತಿದ್ರು ಹುಡುಗೀರು. ಬಂದೋರ್ಗೆಲ್ಲಾ ಇದೇ ಸ್ವಾಗತ. ಸ್ವಲ್ಪ ಡ್ರಾಮಾಟಿಕ್ ಎಫೆಕ್ಟ್ ಇರ್ಲಿ ಅಂತ ಇವ್ರು ಒಳಬಾಗಿಲಲ್ಲಿ ಸ್ವಲ್ಪ ಟೊಮೇಟೋ ಕೆಚಪ್ ಬೇರೇ ಚೆಲ್ಲಿಸಿದ್ರು: ಒಂದು ತಿಂಗಳಿಂದ ಕಣ್ಣು ತುಂಬಾ ನಿದ್ದೆ ಮಾಡ್ತಿದ್ದೀನಮ್ಮಾ" ಅಂದ್ರು ಪಾರ್ವತಮ್ಮ.

ಮನೆ ಬಾಡಿಗೆಗಿದೆ

ಸುರೇಶನ್ನ ನೋಡಿ ತುಂಬಾ ದಿವಸಗಳಾಗಿತ್ತು ಅಂತ ಹೋದ ವಾರ ಮಲ್ಲೇಶ್ವರಕ್ಕೆ ಹೋಗಿದ್ದೆ. ಹಳೇ ಕಾಲದ ಮನೆ. ವಿಶಾಲವಾದ ಕಾಂಪೌಂಡು. ಗೇಟ್ ಬಳಿ ಹೋಗುತ್ತಲೇ, ವಾಚ್‌ಮನ್ ಒಬ್ಬ ನನ್ನನ್ನ ತಡೆದ.

"ಯಾರ್ರೀಪ್ಪ ?"

"ಸುರೇಶ ರಾವ್ ಅವರ್ನ ನೋಡಬೇಕಾಗಿತ್ತು".

"ಆ ಹೆಸರ್ನೋರು ಇಲ್ಲಿಲ್ಲ. ಇದು ಫೂಲ್‌ಚಂದ್ ಮಿಶ್ರಿಮಲ್ ಅವರ ಮನೆ."

ಅರರೇ, ಯಾರಿಗೂ ಹೇಳ್ದೆ ಮನೆ ಏನಾದ್ರೂ ಮಾರ್ಕ್ಯೊಂಬಿಟ್ಟಿದಾನೋ ಅಂದ್ಕೊಳ್ತಿದ್ದ ಹಾಗೆ, ಮನೆ ಒಳಗಿಂದ ಒಬ್ಬ ಆಸಾಮಿ ಹೊರ ಬಂದ.

"ಯಾರು ಬೇಕಾಗಿತ್ತು ?"

"ಸುರೇಶರಾವ್ ಮನೆ ಅಲ್ವೇ ಇದು. ಅವರ್ನ ನೋಡಬೇಕಾಗಿತ್ತು."

"ಓ ಮನೇ ಮಾಲೀಕರನ್ನ ನೋಡ್ಬೇಕೇನು. ಅಲ್ಲೇ ಆ ಪಕ್ಕದ ಓಣಿನಲ್ಲಿ ನೇರವಾಗಿ ಹೋದ್ರೆ ಈ ಮನೆ ಔಟ್ ಹೌಸ್ ಇದೆ. ಅಲ್ಲಿದಾರೆ ಹೋಗಿ" ಅಂದ ಆಸಾಮಿ. ಔಟ್ ಹೌಸ್‌ಗೆ ಹೋಗಿ ಬೆಲ್ ಮಾಡ್ದೆ. ಸುರೇಶನೇ ಬಂದು ಬಾಗಿಲು ತೆಗೆದ. ಮುಖದ ಮೇಲೆ ಒಳ್ಳೇ ಪ್ರೇತ ಕಳೆ. ಒಳಗೆ ಕೂತಮೇಲೆ

"ಏನಯ್ಯಾ ಏನಾಯ್ತು ?" ಅಂತ ವಿಚಾರಿಸಿದೆ.

"ಯಾಕೆ ಕೇಳ್ತಿ ಮಹಾರಾಯ, ಎಲ್ಲಾ ನನ್ನ ಕರ್ಮ. ಆರು ತಿಂಗಳ ಕೆಳಗೆ ನಾವಿಬ್ಬರೂ ಗಂಡ ಹೆಂಡ್ತಿ ಶಾರಿ ಮನೆಗೆ ಹೋಗಿ ಬರೋಣ ಅಂತ ಬೊಂಬಾಯಿಗೆ ಹೋಗಿದ್ವಿ, ಒಂದು ತಿಂಗಳು ಅಲ್ಲಿದ್ದು ಆ ಮೇಲೆ ಡೆಲ್ಲಿ, ಆಗ್ರಾ ಎಲ್ಲಾ ನೋಡಿ ಕೊಂಡು, ಮೂರು ತಿಂಗಳಾದ ಮೇಲೆ ಮನೆಗೆ ಬಂದ್ರೆ, ಇದೇ ವಾಚ್‌ಮನ್ ನಮ್ಮನ್ನ ತಡೆದ. ವಿಚಾರಿಸಿದ ಮೇಲೆ ತಿಳೀತು ನಮ್ಮನೇನ ರೆಂಟ್ ಕಂಟ್ರೋಲ್ ನೋರು ಖಾಲಿ ಅಂತ ನೋಟಿಫೈ ಮಾಡಿ, ನಾವಿಲ್ಲದಾಗ ಎಕ್ಸ್‌ಪಾರ್ಟಿ ವಿಚಾರಣೆ ನಡೆಸಿ, ಈ ಮನೇನ ಮಿಸ್ರಿಮಲ್‌ಗೆ ಅಲಾಟ್ ಮಾಡ್ಬಿಟ್ಟಿದ್ರು. ಅವ್ನು ನಮ್ಮ ಸಾಮಾನುಗಳ್ನೆಲ್ಲಾ ಪುಣ್ಯಕ್ಕೆ ಈ ಔಟ್ ಹೌಸ್‌ನಲ್ಲಿ ಹಾಕಿದ್ದ, ಬೇರೇ ವಿಧಿ ಇಲ್ದೆ ಇಲ್ಲೇ ನೆಲೆಸಿದ್ದೀವಿ. ದಿನ ಬೆಳಗಾದ್ರೆ ಲಾಯರ್ ಆಫೀಸು, ಕೋರ್ಟು. ಲಾಯರೇನೋ 'ಏನೂ ಯೋಚ್ನೆ ಮಾಡ್ಬೇಡಿ' ಅಂತ ಹೇಳ್ತಾನೇ ಇದಾರೆ. ಏನೂ ಪ್ರಯೋಜನವಿಲ್ಲ" ಅಂತ ಅತ್ತುಕೊಂಡ

"ಸುರೇಶ ಇದಕ್ಕೆಲ್ಲಾ ಚಿಂತೆ ಮಾಡಿ ಉಪಯೋಗ ಇಲ್ಲ. ಆ ಮಿಸ್ರಿಮಲ್‌ನೇ ಕೇಳಿ, ಅವನ ವಿಧಾನಾನೇ ಅನುಸರಿಸಿ, ನೀನೂ ಒಂದು ಬಾಡಿಗೆ ಮನೆ ಗಿಟ್ಟಿಸ್ಕೊ ಅಂತ ಜಾಣತನದ ಸಲಹೆ ಮಾಡಿದೆ.

"ಮನೆ ಇಲ್ದಿದ್ರೂ ಪರವಾಗಿಲ್ಲ, ಬೇರ್ಯೋರ ಮನೆ ಕದಿಯೋ ಕೆಲ್ಸ ಮಾತ್ರ ಬೇಡಪ್ಪಾ" ಅಂದ ಸುರೇಶ. ತೀರ ಹತ್ತೊಂಭತ್ತನೇ ಶತಮಾನದ ಪ್ರಾಣಿ. ಈ ಶತಮಾನಕ್ಕೆ ಲಾಯಕ್ಕಿಲ್ಲ. ಏನಂತೀರ ?

ಬೆಂಗಳೂರು ಹಾರ್ಟ್ ಪ್ರಾಜೆಕ್ಟ್

"ದಿನಾಗಲೂ ಬೆಳಗ್ಗೆ ಒಂದು ಕೋಳಿ ಮೊಟ್ಟೆ, ಒಂದು ಲೋಟ ಕೆನೆ ಹಾಲು, ಮಧ್ಯಾಹ್ನದ ಊಟಕ್ಕೆ ಧಾರಾಳವಾಗಿ ಹಸುವಿನ ತುಪ್ಪ, ಸಂಜೆ ಕಾಫಿಯ ಜೊತೆ ಕರಿದ ತಿಂಡಿ, ರಾತ್ರಿ ಊಟ ಆದ ಮೇಲೆ ಜಿಲೇಬಿ ಅಥವಾ ಐಸ್ ಕ್ರೀಂ. ಇಷ್ಟನ್ನ ತಪ್ಪದೇ ತೆಗೆದುಕೊಂಡ್ರೆ ಕೆಲವೇ ವರ್ಷಗಳಲ್ಲಿ ಹೃದಯಾಘಾತ ಖಂಡಿತ" ಎನ್ನುತ್ತಾರೆ ಅಮೇರಿಕಾದ ಡಾ|| ಹಾನ್ಸ್ ಡೀಲ್.

ಈ ಮಹನೀಯರು ಇತ್ತೀಚೆಗೆ ಹೃದಯ ರಕ್ಷಣೆಗೆ ನಡೆಸಿದ ಶಿಬಿರಕ್ಕೆ ನಮ್ಮ ರಂಗ ಹೋಗಿದ್ದ.

ಮೊನ್ನೆ ಅವ ಸಿಕ್ಕಾಗ


"ಏನು ರಂಗಾ, ಶಿಬಿರದಲ್ಲಿ ಏನು ಕಲಿತೆ ?" ಅಂತ ಕೇಳಿದಾಗ ಮೇಲಿನ ಮಾಹಿತಿ ನೀಡಿದ.

"ಹಾಗಾದರೆ ಏನು ತಿನ್ನಬೇಕಂತೆ ?"

"ಎಣ್ಣೆ, ಉಪ್ಪು, ಸಕ್ಕರೆ, ಮಾಂಸಾಹಾರ, ಕೋಳಿಮೊಟ್ಟೆ, ಮದ್ಯ ಸೇವನೆ, ಸಿಗರೇಟು ಇವಿಷ್ಟು ಬಿಟ್ಟು ಇನ್ನೇನು ಬೇಕಾದರೂ ತಿನ್ನಬಹುದು. ದಿನಾಗಲೂ ಅರ್ಧ ಘಂಟೆ ನಡಿಯೋದು ಮಾತ್ರ ತಪ್ಪಿಸಬಾರದು. ಆಗ ಹೃದಯಾಘಾತದ ಸಂಭವ ಬಹು ಕಡಿಮೆ ಅಂತೆ" ಅಂದ ರಂಗ.

"ಇಷ್ಟೆಲ್ಲಾ ಪಥ್ಯ ಮಾಡಿದ್ರೆ ಒಂದು ನೂರು ವರ್ಷ ಬದುಕಬಹುದೇ ?" ನನ್ನ ಪ್ರಶ್ನೆ.

"ಒಂದು ನೂರು ವರ್ಷ ಬದುಕೋದು ಗ್ಯಾರಂಟಿ ಇಲ್ಲ ಗುರು. ಆದ್ರೆ ಆ ರೀತಿ ಪಥ್ಯದಲ್ಲಿದ್ರೆ ಒಂದೊಂದು ವರ್ಷಾನೂ ಒಂದು ನೂರು ವರ್ಷಗಳಂತೇ ಕಾಣುತ್ತೆ" ಅಂದ ರಂಗ. ಬಲೇ ಕುಹಕಿ ಅವ.



ಒರೆಕೋರೆಯ ಕನ್ನಡಿ

— ಆರ್. ಕೆ. ಲಕ್ಷ್ಮಣ್

ಜನರಿಗೆ ನನ್ನ ವೃತ್ತಿಯ ಬಗ್ಗೆ ಕುತೂಹಲವಿರುವುದರಿಂದ ಅನೇಕ ವಿಚಿತ್ರ ಪ್ರಶ್ನೆಗಳನ್ನು ಕೇಳಿ ತಮ್ಮ ಅನುಮಾನಗಳನ್ನು ಪರಿಹರಿಸಿಕೊಳ್ಳಲೆತ್ನಿಸುತ್ತಾರೆ. ಈಚೆಗೆ ಹೆಂಗಸೊಬ್ಬರು "ನಿಮ್ಮ ವ್ಯಂಗ್ಯಚಿತ್ರಗಳಿಗೆ ಚಿತ್ರಗಳನ್ನು ನೀವೇ ಬರೀತೀರಾ" ಎಂದು ನನ್ನನ್ನು ಕೇಳಿದರು. "ಹೌದು" ಎಂದಾಗ "ಅಡಿಬರಹಗಳನ್ನು ?" ಎಂದೂ ಪ್ರಶ್ನಿಸಿದರು. "ಅದನ್ನೂ ನಾನೇ ಬರೆಯೋದು" ಎಂದೆ. ಕಡೆಗೂ ಆಕೆ ಸೋಲೊಪ್ಪದೇ "ನಿಮಗೆ ವಸ್ತುವೂ ಸ್ವಂತವಾಗಿ ಹೊಳೆಯುತ್ತಾ ?... ಯಾರೂ ನಿಮಗೆ 'ಐಡಿಯಾ' ಕೊಡೋದಿಲ್ವಾ?" ಎಂದೂ ಕೇಳಿದರು. ಇದು ಸ್ವಲ್ಪ ಅತಿರೇಕದ ಉದಾಹರಣೆ ಇರಬಹುದು. ಆದರೆ ನಾನೆದುರಿಸುವ ಹೆಚ್ಚಿನಂಶ ಪ್ರಶ್ನೆಗಳು ನನಗೆ ನನ್ನ ವ್ಯಂಗ್ಯಚಿತ್ರಗಳು ಹೊಳೆಯುವುದು ಹೇಗೆಂದು. ಈ ಪ್ರಶ್ನೆಗೆ ಗಂಭೀರ ಉತ್ತರ ಕೊಡುವುದಕ್ಕೆ ನನ್ನಿಂದ ಸಾಧ್ಯವಿಲ್ಲ. ನಾನು ಸಾಮಾನ್ಯ ವಾಗಿ ಇಂಥ ಪ್ರಶ್ನೆಗಳನ್ನು ಒಂದು ಚಟಾಕಿಯೊಂದಿಗೆ ಹಾರಿಸಿಬಿಡುತ್ತೇನೆ. ನನ್ನನ್ನು ಕಾಡುವ ಇತರ ಪ್ರಶ್ನೆಗಳೆಂದರೆ ನನ್ನ ಮೂಲ ವ್ಯಂಗ್ಯಚಿತ್ರ ಎಷ್ಟು ದೊಡ್ಡ ದಾಗಿರುತ್ತೆ ? ಅದನ್ನು ಬರೆಯಲು ನನಗೆ ಹಿಡಿಸುವ ಸಮಯವೆಷ್ಟು ? ನನ್ನ ಕೈಕೆಳಗೆ ಎಷ್ಟು ಜನ ಕೆಲಸ ಮಾಡ್ತಾರೆ ? ನಾನು ಮಂತ್ರಿಗಳನ್ನ ಹಾಸ್ಯ ಮಾಡಿ ದಾಗ ಅವರ ಪ್ರತಿಕ್ರಿಯೆ ಏನು ? ಅವರಿಗೂ ಹಾಸ್ಯ ಪ್ರಜ್ಞೆ ಇದೆಯೋ ? ನನ್ನನ್ನು ಯಾವಾಗಲಾದರೂ ಬಂಧಿಸಿದ್ದಾರೆಯೋ ? ಇಲ್ಲವೆಂದಾದರೆ ಯಾಕೆ ಬಂಧಿಸಿಲ್ಲ ? ಇತ್ಯಾದಿ, ಇತ್ಯಾದಿ. ಈ ಎಲ್ಲ ಪ್ರಶ್ನೆಗಳಿಗೂ ನಾನು ಸಂದರ್ಭೋ ಚಿತವಾಗಿ, ಪ್ರಶ್ನಿಸುವವರ ಮನೋಧರ್ಮ ಗಾಂಭೀರ್ಯಕ್ಕನುಸಾರವಾಗಿ ಹಾರಿಕೆಯ, ಗಂಭೀರ ವಿದ್ವತ್ಪೂರ್ಣ ಉತ್ತರಗಳನ್ನು ಕೊಡುತ್ತೇನೆ.

ಆದರೆ ಅಪರೂಪಕ್ಕೆ ಎದುರಾಗುವ ಒಂದೇ ಒಂದು ಪ್ರಶ್ನೆ ನನ್ನನ್ನು ತೀವ್ರ ಆತ್ಮಾವಲೋಕನದ ಲೋಕಕ್ಕೆ ಎಳೆದೊಯ್ಯುತ್ತದೆ. ಈ ಪ್ರಶ್ನೆಯಲ್ಲಿ ನನ್ನನ್ನು ನಾನು ಗುರುತಿಸಿಕೊಳ್ಳಲೆತ್ನಿಸುತ್ತೇನೆ. ಆ ಪ್ರಶ್ನೆ : "ನೀವು ಸುತ್ತ ಕಣ್ಣಾಡಿಸಿದಾಗ ನಿಮಗೆ ಯಾವುದಾದರೂ ವಿಷಯ ತಮಾಷೆಯಾಗಿ ಕಾಣುತ್ತದೆಯೋ ?"

ತನ್ನ ಸಾಹಚರ್ಯದಿಂದಿರುವ ದಿನನಿತ್ಯದ ಜಂಜಡಗಳಿಗೆ ಹೊರತಾಗಿ ವ್ಯಂಗ್ಯ ಚಿತ್ರಗಾರನೇನೂ ಬದುಕನ್ನು ನಡೆಸುವುದಿಲ್ಲ. ಅವನ ಜೀವನ ಸದಾ ನಗೆಯ

ಸೆಲೆಯೋ ಆಗಿರುವುದಿಲ್ಲ. ಈರುಳ್ಳಿಯ ಬೆಲೆ ಏರುಪೇರಾದರೆ ಅದು ಪ್ರಾಥಮಿಕ ಶಾಲಾ ಮಾಸ್ತರನ ಮೇಲೆ ಬೀರಿದಷ್ಟೇ ಪ್ರಭಾವವನ್ನು ನನ್ನ ಮೇಲೂ ಬೀರುತ್ತದೆ, ನನಗೂ ಬೆಲೆ ಇಳಿದಾಗ ಖುಷಿ, ಏರಿದಾಗ ಕೋಪ ಉಂಟಾಗುತ್ತದೆ. ತೆರಿಗೆಗಳು ನನ್ನ ಚೈತನ್ಯವನ್ನು ಉಡುಗಿಸಿ ಬಿಡುತ್ತವೆ. ಧ್ವನಿವರ್ಧಕದಿಂದ ಹೊಮ್ಮುವ ಭಾಷಣಗಳು ನನಗೂ ಬೋರ್ ಹೊಡೆಸುತ್ತವೆ. ಟ್ರಾಫಿಕ್ ಜಾಂ ನನ್ನನ್ನು ಹುಚ್ಚನಾಗಿಸುತ್ತದೆ. ವೈದ್ಯನೊಬ್ಬ ಜೀವನವನ್ನು ಕೇವಲ ಕೆಮ್ಮು, ನೆಗಡಿ. ಜ್ವರ. ಉಸಿರಾಟದ ತೊಂದರೆಯ ದೃಷ್ಟಿಕೋನದಿಂದ ಮಾತ್ರ ನೋಡುವುದಿಲ್ಲವಷ್ಟೆ ? ಸಿನೆಮಾ ನಟರಿಗೆ ಕ್ಯಾಮರಾದಳತೆಯಲ್ಲಿ ಬರುವ ಸುಂದರ ದೃಶ್ಯಗಳು, ಕಾಮ, ಫಾಡು ಮತ್ತು ಕೆಚಪ್ ರಕ್ತಕ್ಕೆ ಮಿಗಿಲಾದ ಜೀವನವಿದೆಯೆಂದು ಗುರುತಿಸುವಷ್ಟು ಚಾತುರ್ಯ ಖಂಡಿತವಾಗಿಯೂ ಇರುತ್ತದೆ. ಹಾಗಿದ್ದಲ್ಲಿ ವ್ಯಂಗ್ಯಚಿತ್ರಗಾರ ಮಾತ್ರ ತನ್ನ ಜೀವನದುದ್ದಕ್ಕೂ ಬರೇ ವ್ಯಂಗ್ಯ ಚಿತ್ರಗಳನ್ನೂ, ಹಾಸ್ಯ ಸನ್ನಿವೇಶ ಗಳನ್ನೂ ಏಕೆ ಕಾಣಬೇಕು ? ನನ್ನ ಜೀವನ ಸೀಮೆಎಣ್ಣೆ ಅಥವಾ ಸಕ್ಕರೆ ಕ್ಯೂ ನಲ್ಲಿ ನಿಂತಿರುವ ಪಕ್ಕದ ಮನುಷ್ಯನಷ್ಟೇ ತ್ರಾಸದಾಯಕ ಎಂದು ನನಗರಿವಾದಾಗ ಒಂದು ಸಮಾಧಾನವೂ ಆಗುತ್ತದೆ.

ಆದರೂ ನನ್ನ ವೃತ್ತಿ, ನಾನು ಜೀವನವನ್ನು ಗ್ರಹಿಸುವ ರೀತಿಯ ಮೇಲೆ ಪರಿಣಾಮ ಬೀರಿಲ್ಲವೇ ಎಂದು ಆಗಾಗ ಆಲೋಚಿಸುವುದುಂಟು. ದಿನವೆಲ್ಲಾ ವ್ಯಂಗ್ಯ ಚಿತ್ರಗಳಿಗೆ ಹೊಳಹುಗಳನ್ನು ಹುಡುಕಿ ನನ್ನ ಕೆಲಸ ಮುಗಿಸಿದ ನಂತರವೂ, ನಾನು ಎಚ್ಚರವಿರುವಷ್ಟೂ ಕಾಲ ನನಗರಿವಿಲ್ಲದಂತೆಯೇ ಅಸಾಮಾನ್ಯ ವರ್ತನೆಯ ವೈಚಿತ್ರ್ಯದ ಹುಡುಕಾಟ ನಡೆಸುತ್ತಲೇ ಇರುತ್ತೇನೆ.

ಬೀದಿಯ ಬದಿಯಲ್ಲಿ ನಿಂತು ಅಲ್ಲಿನ ಮುಖಗಳಿಂದ ಮನರಂಜನೆ ಪಡೆಯು ವುದೂ ನನಗೆ ಪ್ರಿಯ ಹವ್ಯಾಸವೇ. ಅಲ್ಲಿನ ಮುಖಗಳು ಮೂರು ಆಯಾಮದ ಚಿತ್ರಪಟಗಳ ಗ್ಯಾಲರಿಯಂತೆ ನನ್ನ ಮುಂದೆ ನಿಂತು, ನನ್ನ ಆಸಕ್ತಿ ಕೆರಳಿಸುತ್ತವೆ. ಬೀದಿಯಾಚೆಯ ಬದಿಯಲ್ಲಿ ನರ್ತಿಸುವ ಹದಿನೆಂಟು ವರ್ಷದ ಹುಡುಗಿಯಾಗಲೀ, ನನ್ನ ಕಾಲ ಬಳಿ ಸುಕ್ಕುಗಟ್ಟಿದ ಮುಖ ಹೊತ್ತು ಕುಳಿತಿರುವ ಭಿಕ್ಷುಕನಾಗಲೀ, ನನ್ನನ್ನು ದಾಟಿ ನಡೆವ ಅನೇಕ ಜನರಾಗಲೀ ನನ್ನ ಆಸಕ್ತಿಯನ್ನು ಕೆರಳಿಸುವ ವಸ್ತು ಗಳಾಗುತ್ತಾರೆ. ಅವರನ್ನು ನೋಡಿ ನಾನು ಅವಾಕ್ಕಾಗುತ್ತೇನೆ.

ವೃತ್ತಿಗಾಗಿ ನಾನು ನಡೆಸುವ ಈ ಹವ್ಯಾಸ ಕೇವಲ ಮನುಷ್ಯರ ಭೌತಿಕ ಓರೆ

ಕೋರೆಗಳನ್ನು ನೋಡಲು ಮಾತ್ರ ಸೀಮಿತವಾಗಿಲ್ಲ. ಈ ಹವ್ಯಾಸ ಅನೇಕ ದೂರ ವಿಸ್ತಾರಗಳನ್ನು ಕ್ರಮಿಸಿ ವ್ಯಂಗ್ಯ ಚಿತ್ರಗಾರನ ಕುಂಚಕ್ಕೂ ದಕ್ಕದ ಮಾನವ ವರ್ತನೆಯ ವೈಚಿತ್ರ್ಯಗಳ ಅಧ್ಯಯನಕ್ಕೆ ಎಡೆಮಾಡಿಕೊಡುತ್ತದೆ. ಅನೇಕ ವೈಚಿತ್ರಗಳನ್ನು ಬಾಯಲ್ಲಿ ಹೇಳಬಹುದೇ ಹೊರತು ಚಿತ್ರ ಬಿಡಿಸಲು ಸಾಧ್ಯವಿಲ್ಲ.

ಎಲ್ಲರಿಗೂ ತಮ್ಮ ಸುತ್ತಮುತ್ತಲಿನ ಜನ ಮೂರ್ಖರಂತೆ, ತಲೆ ಹಿಡುಕರಂತೆ, ಜಂಭದ ಕೋಳಿಗಳಂತೆ, ಸ್ವಾಭಿಮಾನಿಗಳಂತೆ ಅಥವಾ ಕೇವಲ ಮಂಕರಂತೆ ಕಂಡುಬರುತ್ತಾರೆ. ಆದರೆ ಸ್ವಲ್ಪ ತಾಳ್ಮೆ ವಹಿಸಿ ವಸ್ತುನಿಷ್ಠವಾಗಿ ಗಮನಿಸಿದರೆ ಅವರಲ್ಲಿನ ಈ ಎಲ್ಲ ಅತಿರೇಕಗಳೂ ಪ್ರಿಯವಾಗುತ್ತವೆ.

ಉದಾಹರಣೆಗೆ ನನ್ನ ಸ್ನೇಹಿತರೊಬ್ಬರು ಇದ್ದಕ್ಕಿದ್ದಂತೆ ನಮ್ಮ ಕಾಲೊನಿಯ ಎರಡು ಚದುರ ಮೈಲು ವಿಸ್ತಾರದಲ್ಲಿ ವಾಸವಾಗಿದ್ದ ಎಲ್ಲ ಜನರ ದ್ವೇಷದ, ನಿಕೃಷ್ಟದ ವಸ್ತುವಾಗಿ ಹೋದರು. ಅದಕ್ಕೆ ಕಾರಣ, ಕಾಲೊನಿಯ ಜನ ಆತ ಅತಿ ಜಂಭದ, ಆತ್ಮರತಿಯತಿರೇಕದ, ಸ್ವಾಭಿಮಾನಿ ತಲೆಹಿಡುಕ ಎಂಬುದನ್ನು ಕಂಡು ಹಿಡಿದದ್ದು. ಈ ಎಲ್ಲ ಪಟ್ಟಗಳನ್ನೂ ಸಂಪಾದಿಸಲು ನನ್ನ ಮಿತ್ರರು ಮಾಡಿದ್ದಿಷ್ಟೇ. ತಮ್ಮ ಐವತ್ತನೇ ಹುಟ್ಟುಹಬ್ಬವನ್ನು ಪ್ರಪಂಚದಲ್ಲಿ ಅಂಥ ಸಾಧನೆಯನ್ನು ಬೇರಾರೂ ಸಾಧಿಸಿಯೇ ಇಲ್ಲ ಎನ್ನುವ ಹಾಗೆ ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಿ, ಮುಂದುವರೆದದ್ದು. ಈ ಚಾರಿತ್ರಿಕ ದಿನದ ಮುಂಜಾನೆಯೇ ರಸ್ತೆಯಲ್ಲೆಲ್ಲಾ ಧ್ವನಿವರ್ಧಕಗಳನ್ನೇರಿಸಿ, ಫಿಲ್ಮೀ ಹಾಡುಗಳ ಆರ್ಭಟದ ಸುಪ್ರಭಾತವನ್ನು ಬಿತ್ತರಿಸಿದರು. ಅವರ ಮನೆಯ ಮರಗಳನ್ನು, ಕುಂಡದಲ್ಲಿಯ ಗಿಡಗಳನ್ನು, ಮಿಣುಕುವ ಬಣ್ಣದ ಬಲ್ಬುಗಳಿಂದ ಅಲಕರಿಸಿದ್ದರು. ತಿಂಡಿ, ಐಸ್‌ಕ್ರೀಂಗಳನ್ನು ತಮ್ಮ ಹೆಸರು ಅಚ್ಚೊತ್ತಿದ್ದ, ವಯಸ್ಸು ನಮೂದಿಸಿದ್ದ ತಟ್ಟೆ, ಲೋಟಗಳಲ್ಲಿ ಹಂಚಿದರು ! ಈ ವರ್ತನೆಗೆ ನನ್ನ ಪ್ರತಿಕ್ರಿಯೆ ಮಿಕ್ಕವರಿಗಿಂತ ಭಿನ್ನವಾಗಿತ್ತು. ಅವರ ಆತ್ಮರತಿ ನನಗೆ ಕೋಪ ತರಿಸಲಿಲ್ಲ. ಕೇವಲ ಕುತೂಹಲ ಉಂಟುಮಾಡಿತು. ಎಲ್ಲರಿಗೆ ಕಂಡಂತೆ ಅವರು ನನಗೆ ಖಳರಂತೆ ಕಾಣಲಿಲ್ಲ; ಬದಲಿಗೆ ತಮಾಷೆಯಾಗಿ ಕಂಡರು. ಅವರ ಆ ವರ್ತನೆಯನ್ನು ಗಮನಿಸುವುದು ನನಗೆ ಆಸಕ್ತಿಯ ವಿಷಯವಾಯಿತು.

ನಾನು ಆಸಕ್ತಿಯಿಂದ ಭೇಟಿಯಾಗುವ ಮತ್ತೊಂದು ವ್ಯಕ್ತಿತ್ವವೆಂದರೆ ಯೂನಿವರ್ಸಿಟಿಯ ಪ್ರೊಫೆಸರರೊಬ್ಬರದು. ಅವರದಂತೂ ತುಂಬಾ ಕುತೂಹಲ ಹುಟ್ಟಿಸುವ ವ್ಯಕ್ತಿತ್ವ. ತಾವು ಕಲಿಸುವ ವಿಷಯದ ಬಗ್ಗೆ ಅವರು ಒಂದು ಅಥಾರಿಟಿಯಾದರೂ ಎಲ್ಲರೂ ಅವರನ್ನು ದೊಡ್ಡ ಭೈರಿಗೆ ಗಿರಾಕಿ ಎಂದು ಪಂಗಣೆ


ಸುತ್ತಾರೆ. ಯಾವುದೇ ಸಂಭಾಷಣೆಯಲ್ಲೂ ತಮ್ಮ ವ್ಯಕ್ತಿತ್ವವನ್ನು ತೋರ್ಪಡಿಸಿಕೊಳ್ಳಬೇಕೆಂಬ ಆಸೆ, ಅವರಿಗೆ. ನಿಮ್ಮ ಮಾತಿನ ವಿಷಯ ಯಾವುದೇ ಆಗಿರಲಿ, ಅಲ್ಲಿ ಅವರಿಗೆ ಸಂಬಂಧಪಟ್ಟ ಒಂದು ಘಟನೆ ಇದ್ದೇ ಇರುತ್ತದೆ. ಈಚೆಗೆ ಸ್ವಲ್ಪ ಸೆಕೆ ಜಾಸ್ತಿಯಾಯ್ತಲ್ಲ ಎಂಬ ಒಂದೇ ವಾಕ್ಯ ಅವರನ್ನು ಸುರು ಹಚ್ಚಿಸಲು ಸಾಕು. "ಹೌದು, ಹೌದು. ನಾನು ಒಂದ್ಸರ್ತಿ ಜಿನೀವಾಕ್ಕೆ ಹೋಗಿದ್ದಾಗ ಹವೆ ಬಹಳ ತಣ್ಣಗಿತ್ತು. ತುಂಬಾ ಚಳಿ. ಅಲ್ಲಿಗೆ ನನ್ನನ್ನು ಒಂದು ಕಾನ್ಫರೆನ್ಸಿಗಾಗಿ ಕರೆದಿದ್ರು. ಆ ಕಾನ್ಫರೆನ್ಸನ್ನು ಉದ್ದೇಶಿಸಿ ಮಾತನಾಡಿದ ನಾಲ್ಕು ಪ್ರಮುಖ ವ್ಯಕ್ತಿಗಳಲ್ಲಿ ನಾನೂ ಒಬ್ಬ. ಅಲ್ಲೇ ನಾನು, ಮುಂದೆ ಪ್ರಖ್ಯಾತವಾದ ಈ ಮಾತುಗಳನ್ನು ಹೇಳಿದ್ದು..."


ಅವರ ಸಂಗದಲ್ಲಿ ನಾನು ಯಾವಾಗಲೂ ಆಸಕ್ತಿಯಿಂದ ಕುಳಿತಿರುತ್ತೇನೆ. ಯಾವುದೇ ವಿಷಯವಿರಲಿ, ಎಷ್ಟು ಚಾತುರ್ಯದಿಂದ ತಮ್ಮನ್ನು ತಾವೇ ಹೇರಿಕೊಳ್ಳುತ್ತಾರೆಂದು ಗಮನಿಸುವುದೂ ಬಹಳ ಆಸಕ್ತಿಕರವಾಗಿರುತ್ತದೆ. ಒಮ್ಮೆ ನನಗೆ ವ್ಯಂಗ್ಯಚಿತ್ರಗಳು ಹೊಳೆಯುವುದು ಹೇಗೆಂಬ ಪ್ರಶ್ನೆಯೊಂದಿಗೆ ಸಂಭಾಷಣೆ ಪ್ರಾರಂಭಿಸಿದರು. ಅವರಿಗೆ ಉತ್ತರಿಸಲು ನಾನು ಗಂಟಲು ಸರಿಮಾಡಿಕೊಳ್ಳುವಷ್ಟರಲ್ಲೇ ಅವರು ತಮ್ಮ ದಿನಚರಿಯ ಪ್ರವರ ಓದಲು ಪ್ರಾರಂಭಿಸಿದರು. ಅವರು ದಿನವೂ ವಾಕ್ ಹೋಗುವುದು, ಸಂಜೆ ಸೇದುವ ಚುಟ್ಟ, ಓದುವಾಗಿನ ಭಂಗಿ, ತರಗತಿಯಲ್ಲಿ ಪಾಠ ಮಾಡುವುದಕ್ಕೆ ನಡೆಸುವ ತಯಾರಿ, ಎಲ್ಲವನ್ನೂ ಹೇಳಿ, ಕಡೆಗೆ ನಾನು ಕೆಲಸ ಮಾಡುವ ರೀತಿಯನ್ನು ಅವರಿಗೆ ವಿವರಿಸಿದ್ದಕ್ಕಾಗಿ ಕೃತಜ್ಞತೆಯನ್ನೂ ಸೂಚಿಸಿಬಿಟ್ಟರು ! ಗುಂಪಿನಲ್ಲಿ ಸಂಭಾಷಣೆಗೆ ಕೂರುವಾಗ ದೊಡ್ಡ ಪಿಡುಗಿನಂತೆ ಈ ವ್ಯಕ್ತಿ ನನಗಂತೂ ತುಂಬಾ ಪ್ರಿಯರಾಗುತ್ತಾರೆ. ನಾನು ಅವರೊಂದಿಗೆ ಗಂಟೆಗಟ್ಟಲೆ ಕುಳಿತು ಅವರನ್ನಾಲಿಸಬಲ್ಲೆ. ನನಗಂತೂ ಬೇಸರವಾಗುವುದೇ ಇಲ್ಲ. ಅವರನ್ನು ನಿಶ್ಶಸ್ತ್ರೀಕರಣದಿಂದ ತಲೆಯ ಹೊಟ್ಟಿನವರೆಗೆ, ರಸ್ತೆ ರಿಪೇರಿಯಿಂದ ಸಮುದ್ರಯಾನದಂತಹ ವಿಷಯಗಳಿಗೆ ಒಯ್ದು, ಅವರು ಆ ವಿಷಯವನ್ನು ಖುಷಿಯಿಂದ ಪ್ರವೇಶಿಸುವ ರೀತಿಯನ್ನು ನೋಡುವುದೇ ಒಂದು ಅದ್ಭುತ.

ನಾನು ಸಾಧಾರಣವಾಗಿ ಭೇಟಿಯಾಗುವ ಮತ್ತೊಂದು ವ್ಯಕ್ತಿತ್ವವೂ ಇದೆ. ಉದ್ದಕ್ಕೆ, ಸಣ್ಣಗಿರುವ ಈ ವ್ಯಕ್ತಿಯನ್ನು ನೋಡಿದಾಗೆಲ್ಲಾ ನನಗೆ ರೇಜರ್‌ನ ನೆನಪಾಗುತ್ತದೆ. ಅವನ ಕಣ್ಣುಗಳು ಆಗತಾನೇ ಯುದ್ಧ ಮುಗಿಸಿ ಬಂದಹಾಗೆ ಕೆಂಪೇರಿರುತ್ತವೆ. ಎಲ್ಲ ಸಾಂಸ್ಕೃತಿಕ ಉತ್ಸವಗಳಲ್ಲೂ ಮೊದಲ ಸಾಲಿನಲ್ಲಿ ಅವನು ಕುಳಿತಿರುವುದನ್ನು ನಾನು ಕಂಡಿದ್ದೇನೆ. ಆ ಸಾಂಸ್ಕೃತಿಕ ಸಂದರ್ಭ ಸಂಗೀತವೇ ಆಗಿರಬಹುದು, ಇಲ್ಲವೇ ನೃತ್ಯ, ಇಲ್ಲಾ ತೊಗಲುಗೊಂಬೆಯಾಟ. ಯಾರಾದರೂ

ಅವನು ಆ ಸಂಜೆಯನ್ನು ಆಸ್ವಾದಿಸಲು ಅಲ್ಲಿಗೆ ಬಂದಿದ್ದಾನೆಂದು ಊಹಿಸಿದರೆ ಅದು ತಪ್ಪಾದೀತು. ಉಹೂಂ. ಅಂಥ ಖುಷಿಗಳೆಲ್ಲಾ ಅವನಿಗೆ ಪರಕೀಯ. ಆತ ಅತಿ ಶುದ್ಧವಾದಿ (Purist). ಅವನ ನಂಬಿಕೆಗಳು ಸಂಪೂರ್ಣವಾಗಿ ಆತ್ಮಹಿಂಸೆ ಮಾಡಿಕೊಳ್ಳುವುದು ! ಸಂಗೀತ ಕೇಳುತ್ತಾ ಕುಳಿತಿರುವ ಅವನು, ಮುಖ ಕಿವುಚುತ್ತಾನೆ. ಯಾವುದೋ ಭೀಕರ ಕೊಲೆಯನ್ನು ನೋಡುತ್ತಿರುವವನ ಹಾಗೆ ಕುರ್ಚಿಯಲ್ಲಿ ಕುಳಿತು ಚಟಪಡಿಸುತ್ತಾನೆ. ಅವನ ಪಕ್ಕದಲ್ಲಿರುವವರು ಮಾತ್ರ ಆ ಸಂಗೀತವನ್ನು ಖುಷಿಯಿಂದ ಬಾಯ್ದೆರೆದು ಆಲಿಸುತ್ತಿರುತ್ತಾರೆ. ಕಾರ್ಯಕ್ರಮ ಮುಗಿಯುತ್ತಿದ್ದ ಹಾಗೇ ಕಣ್ಣನ್ನು ಇನ್ನಷ್ಟು ಕೆಂಪಾಗಿಸಿ ಆ ಯುವಕ ಹೊರಬರುತ್ತಾನೆ. ಕೋಪದಿಂದ ಕುದಿಯುತ್ತಾನೆ. ಕಛೇರಿ ಕೊಟ್ಟವನ ತಲೆಯನ್ನು ಆ ವಾದ್ಯದಿಂದಲೇ ಬಾರಿಸಿ ಪೋಳುಮಾಡಬೇಕೆನಿಸಿತೆಂದೋ, ಹಾಡಿದವನ ಗಂಟಲು ಹಿಸುಕಿ ಅಲ್ಲೇ ಕೊಲೆ ಮಾಡಬೇಕೆನಿಸಿತೆಂದೋ ಹೇಳುತ್ತಾನೆ. ಸಂಗೀತಗಾರ ಹಾಡಿನ ಅರ್ಥವನ್ನು ಕುಲಗೆಡಿಸಿದ, ಅಥವಾ ಪದಗಳ ಉಚ್ಚಾರ ತಪ್ಪಾಗಿ ಮಾಡಿದ, ತುಂಬಾ ನಿಧಾನವಾಗಿ ಹಾಡಿದ, ಅಥವಾ ಅವಸರವಸರವಾಗಿ ಹಾಡಿದ, ಹೀಗೆ ಕಾರಣಗಳನ್ನೂ ಕೊಡುತ್ತಾನೆ. ಅವನ ಮಟ್ಟಿಗೆ ಸನಾತನ ನೃತ್ಯಕಲೆ ಸತ್ತು ಹೋಗಿದೆ — ಅದರ ಹೆಸರಿನಲ್ಲಿ ಸರ್ಕಸ್ ನಡೆಯುತ್ತಿದೆ. ಈಗ ನಡೆಯುತ್ತಿರುವುದನ್ನೆಲ್ಲಾ ನಿಷೇಧಿಸಿ. ನಿಷೇಧವನ್ನು ಉಲ್ಲಂಘಿಸಿದವರನ್ನು ಜೈಲಿಗೆ ಹಾಕಬೇಕು ! ಹೀಗೆ ಯಾತನೆಗೊಳಗಾದ ಈ ರಸಿಕನಿಗೆ ನಟರೆಲ್ಲಾ ಮಂಗಾಟ ಮಾಡುವವರು, ಚಿತ್ರ ಕಲೆ ಜನರನ್ನು ವಂಚಿಸುತ್ತಿರುವ ದೊಡ್ಡ ಮಾಧ್ಯಮ ಮತ್ತು ಕಲಾ ಪ್ರಕಾರಗಳೆಲ್ಲಾ ಸತ್ತು. ಈಗ ಜೀವಂತವಿರುವುದು ತನ್ನಾತ್ಮವನ್ನು ನೋಯಿಸುವ ಪರಿಕರಗಳು ಮಾತ್ರ.

ಈ ರೀತಿಯ ಆಸಕ್ತಿಕರ ವ್ಯಕ್ತಿತ್ವಗಳ ನೆನಪು ನನಗೆ ಇನ್ನೂ ಬರುತ್ತವೆ. ಒಟ್ಟಾರೆಯಾಗಿ ಬಹುಶಃ ನನ್ನ ಸಾಮಾನ್ಯ ದೃಷ್ಟಿಕೋನ ನನ್ನ ವೃತ್ತಿಯಿಂದಾಗಿ ಒಂದಿಷ್ಟು ವಕ್ರವಾಗಿದೆ ಎಂದು ಒಪ್ಪಿಕೊಂಡೂ ಬಿಡಬಹುದೇನೋ ! ಈ ಪ್ರಪಂಚ ಗಂಭೀರ ವ್ಯಕ್ತಿತ್ವದ, ಬುದ್ಧಿವಂತ, ದಿನವೂ ಕೆಲಸಕ್ಕೆ ಹೋಗಿ ಸಂಪಾದಿಸಿ ತಮ್ಮ ಸಂಸಾರ ನಿರ್ವಹಿಸುವ ಘನ ವ್ಯಕ್ತಿಗಳಿಂದ ತುಂಬಿದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಜೀವನದಲ್ಲಿ ಎಲ್ಲರೂ ಎದುರಿಗೆ ಕಾಣುವಂತೆಯೇ ಇದ್ದು, ವ್ಯಂಗ್ಯಚಿತ್ರಕಾರ ಚಿತ್ರಿಸುವಂತೆ ಒಂದಿಷ್ಟು ಜನರಾದರೂ ಇಲ್ಲದಿದ್ದರೆ ಜೀವನ ಬಲು ನೀರಸವಾಗುತ್ತಿತ್ತೇನೋ !


ಕಳ್ಳ ಮತ್ತು ಮುಖ್ಯಮಂತ್ರಿ
ಹವಾಯಿ ದ್ವೀಪಗಳು ಅಂತ ಕೇಳಿದ್ದೀರಲ್ಲವೇ. ಅಲ್ಲೊಬ್ಬ ಬೆಸ್ತ. ಅವನ ಗಾಳಕ್ಕೆ ಒಂದು ಸಮೋಹಿನಿ ಮಣಿ ಇತ್ತು. ಆದರ ಸಹಾಯದಿಂದ ಅವನು ಬೇಕಾದಷ್ಟು ಮೀನು ಹಿಡಿದು ಶ್ರೀಮಂತನಾಗಿದ್ದ. ಅವನ ಹೆಸರು ಕಕಾಪಿಪಿ.....
ಮೂಲ: ಪಂಚ್ ಕನ್ನಡಕ್ಕೆ : ಶಿವು.
ಅಯ್ಯೋ! ಕಕಾಪಿಪಿ ಗಾಳದ ಮಣಿ. ಇನ್ನು ನಾವು ಸತ್ತ ಹಾಗೆ
ಎಂಥಹ ಮಧುರ ನಾವು
ಮುಖ್ಯಮಂತ್ರಿ ಫೋಕಿ-ನೂಕುಗೆ ಕಕಾಪಿಪಿಯ ಮಣಿಯ ಮೇಲೆ ಆಸೆ ಆಯಿತು.
ನಿನ್ನ ಮಣಿ ನನಗೆ ಕೊಡು ಕಕಾಪಿಪಿ. ನನ್ನ ಮಗಳು ಹ ಹ್ವಾ ಳನ್ನು ನಿನಗೆ ಕೊಡುತ್ತೇನೆ.
ಹ್ವ ಹ್ವಾ
ನನಗೆ ಅವಳು ಬೇಡ
ಏನೇ ಆಗ್ಲಿ ಮಣಿ. ಕೊಟ್ಬಿಡು
ಮುಖ್ಯಮಂತ್ರಿ ಮಣಿ ನ ಬಲವಂತವಾಗಿ ಕಿತ್ತುಕೊಂಡ ಮೇಲೆ, ಕಕಾಪಿಪಿ ಆ ಊರಿನ ಗಣ್ಯ ಕಳ್ಳ ನಿಹಾಯ್‌ನ ಸಹಾಯ ಬೇಡಿದ.
(ಆ ಊರಿನಲ್ಲಿ ಕಳ್ಳತನ ಸಭ್ಯ ಕಸುಬು)
ಒಂದು ಹಂದಿ ಕೊಟ್ಟರೆ, ಮಣಿ ಕದ್ದು ಕೊಡ್ತೇನೆ
ನಿನ್ನ ದೋಣಿ ಆದಷ್ಟು ಜೋರಾಗಿ ಹೋಗುತ್ತೆ ನಿಹಾಯ್.
ಇದು ಮಾಂತ್ರಿಕ ಹುಟ್ಟು, ಕಳ್ಳರ ಶಾಲೇಲಿ ನನಗೆ ಸಿಕ್ಕ ಮೊದಲ ಬಹುಮಾನ
ಮುಖ್ಯಮಂತ್ರಿ ಗಾಳದಿಂದ ಮಣಿನ ಹೀಗೆ ತೆಗೆದು...... ಮತ್ತೆ ಕಲ್ಲೊಂದನ್ನ ಹೀಗೆ ಕಟ್ಟೇನಿ.
ಮಣಿನ ತಾತ್ಕಾಲಿಕವಾಗಿ ನಿಜವಾದ ಮಾಲೀಕನಿಗೆ ಕೊಟ್ಟರಾಯಿತು.



ನೀತಿ: ಕಸುಬಿನಲ್ಲಿ ನೀವು
ಕಳ್ಳರಾಗಿದ್ದರೂ ಸಾಪ
ಮುಖ್ಯಮಂತ್ರಿಯೊಡನೆ ನೀವು
ಸ್ಪರ್ಧಿಸೋದು ಸಾಧ್ಯವಿಲ್ಲ ಬಿಡಿ!

ವರವ ಪಡೆದವರು

" ಸೂರಿ"

ನಮ್ಮೂರ ಪೇಟೆ ಬೀದೀಲಿದೆಯಲ್ಲ ಲೋಕನಾಥ ಸ್ವಾಮಿ ದೇವಸ್ಥಾನ, ಅದು ಒಂದು ಕಾಲದಲ್ಲಿ ಬಹಳ ಹೆಸರುವಾಸಿಯಾಗಿತ್ತು. ಏನೇನೋ ಹರಕೆಗಳನ್ನ ಹೊತ್ಕೊಂಡು ಊರು ಊರುಗಳಿಂದ ಬರ್ತಾ ಇದ್ದೋರು ಹುಂಡೀಲಿ ಹಾಕ್ತಾ ಇದ್ದ ಚಿಲ್ಲರೆ ಕಾಸನ್ನ ಎಣಿಸೋಕೇನೆ ಹತ್ತು ಜನಾ ಬೇಕಾಗ್ತಾ ಇತ್ತು. ಇದರ ಜತೆಗೆ ಯಾವದೋ ಕಾಲದಲ್ಲಿ ರಾಜ ಮನೆತನದವರು ಕೊಟ್ಟಿದ್ದಂತೆ, ಇಪ್ಪತ್ತೈಕರೆ ಹಣ್ಣಿನ ತೋಟ, ಅದರ ಹುಟ್ಟುವಳೀನೂ ಸೇರ್ಕೊಂಡು ದೇವಸ್ಥಾನದ ಯಾವ ಕೆಲಸಾನೇ ಆದ್ರೂ ಸರೀನೆ. ಅದ್ದೂರಿಯಿಂದ ನಡದು ಹೋಗ್ತಾ ಇತ್ತು. ಯಾವತ್ತೂ ಹೀಗೇ ನಡಕೊಂಡೇ ಹೋಗತ್ತೇನೋ ಅನ್ನೋ ರೀತೀಲಿ.

ಆದ್ರೆ ಈ ಭೂಮಿ ಮೇಲೆ ಯಾವುದು ತಾನೇ ಶಾಶ್ವತ ಹೇಳಿ ? ನಮ್ಮದು ಧರ್ಮಾತೀತ ರಾಷ್ಟ್ರ. ಇಲ್ಲಿ ದೇವರು, ದಿಂಡರು ಅನ್ನೋದು ಏನೂ ಇಲ್ಲ. ಎಲ್ಲಾ ಕೆಲ್ಸಾನೂ ಮಂತ್ರಿಗಳೂ, ಎಮ್ಮೆಲ್ಲೆಗಳೂ ಅನ್ನೋರನ್ನು ಹಿಡಿದ್ರೆ ಮಾತ್ರ ಆಗುತ್ತೆ ಅನ್ನೋರು ಹೆಚ್ಚಾಗ್ತಾ ಬಂದ ಹಾಗೆಲ್ಲ ದೇವಸ್ಥಾನಕ್ಕೆ ಬರೋ ಜನ ಕಡಿಮೆಯಾಗ್ತಾ ಬಂತು. ಈಗ ಹ್ಯಾಗಿದೆ ಅಂದ್ರೆ, ಒಂದು ವಾರದ ತಟ್ಟೆ ಕಾಸೆಲ್ಲಾ ಕೂಡಿದ್ರೂ ಐದು ರೂಪಾಯಿ ಹುಟ್ಟಲ್ಲ. ಇನ್ನು ಆ ಜಮೀನೋ ? ಈಚೆಗೆ ಒಂದು ಐದು ವರ್ಷದ ಕೆಳಗೆ ಸರ್ಕಾರದವರು ಅದನ್ನ Amusement park ಮಾಡ್ತೀವಿ ಅಂತ ಕಿತ್ತು ಕೊಂಡ್ರು. ನೀರೂ ನಿಡಿ ಅಂತ ಏನೂ ಕಾಣದೆ ಇದ್ದ ಬದ್ದ ಗಿಡಗಳೆಲ್ಲಾ ಒಣಗಿ ಹೋದ ಮೇಲೆ, ಅದನ್ನ ಸೈಟುಗಳು ಅಂತ ಮಾಡಿ N.R.I. ಗಳಿಗೆ ಮಾರಿ, ಬಂದ ದುಡ್ಡನ್ನ ಸಿಬ್ಬಂದಿ ಸಂಬಳಕ್ಕೆ ಬಳಸಿಕೊಂಡು ಕೈ ತೊಳಕೊಂಡು ಬಿಟ್ರು.

ಹೀಗೆಲ್ಲ ಆದ್ಮೇಲೆ ನಮ್ಮ ದೇವ್ರ ಗತಿ ?... ದೇವ್ರೇ ಗತಿ. ಕ್ಷೀರಾಭಿಷೇಕ, ಪಂಚಾಮೃತಾಭಿಷೇಕ ಅನ್ನೋವು ಇರಲಿ, ಬೇಸಿಗೆ ಕಾಲ ಬಂದ್ರೆ ತಣ್ಣೀರು ಸ್ನಾನಕ್ಕೂ ಮೋಸ ಆಗ್ತಾ ಇತ್ತು, ಎಷ್ಟೋ ಸಲ. ಇನ್ನ ಅರ್ಚಕರ ಕಥೇನ ಕೇಳೋದೇ ಬೇಡ. ತಿಂಗಳಲ್ಲಿ ಹದಿನೈದು ದಿನ ಅರ್ಧ ಏಕಾದಶಿ. ಆದ್ರೆ ಏನು ಮಾಡೋದು, ಬಂದದ್ದನ್ನ ಅನುಭವಿಸೊಲ್ಲ ಅಂದ್ರೆ ಆಗತ್ತೆ ?

ಆದ್ರೆ ಹೋದ ಶನಿವಾರ ಸಂಜೆ ಮಾತ್ರ ಅರ್ಚಕರಿಗೆ ಎಂದೂ ಇಲ್ಲದಷ್ಟು ಸಿಟ್ಟು ಬಂದಿತ್ತು. ಅಲ್ಲವೇ ಮತ್ತೆ ? ಬಾಗಿಲು ಹಾಕ್ಕೊಂಡು ಮನೇಗೆ ಹೋಗೋ

ಜೈ೦ ಬಂದಿದ್ರೂ ಖಾಲಿ ನಮಸ್ಕಾರಾ ಹಾಕೋಕ್ಕೇ ಆದ್ರೂ ಒಬ್ಬನಾದ್ರೂ ಬಂದಿದ್ರೆ ಕೇಳಿ.

ಬಂದಿದ್ದ ಕೋಪಾನೆಲ್ಲ ದೇವರ ಮೇಲೇ ತಿರುಗಿಸಿ– ಹತ್ತಿರ ಇದ್ದೋನು ಅವನೊಬ್ಬನೇ ತಾನೆ– ಕೇಳಿದ್ರು :

"ದಾಸರೇನೋ ದೊಡ್ಡದಾಗಿ ಹೇಳಿಬಿಟ್ರು, ನಂಬಿ ಕೆಟ್ಟವರಿಲ್ಲವೋ ಅಂತ – ನನ್ನ ಅವಸ್ಥೆ ಏನಾದ್ರೂ ಅವರು ಇವತ್ತು ನೋಡಿದ್ದಿದ್ರೆ ಏನು ಹೇಳ್ತಿದ್ರೋ ?"

"ನಾನೇನು ಮಾಡಲಪ್ಪಾ, ಕಾಲ ಕೆಟ್ಟು ಹೋಗ್ತಾ ಇದೆ. ಜನಗಳಿಗೆ ನನ್ನ ಮೇಲೆ ಯಾಕೋ ನಂಬಿಕೇನೆ ಹೊರಟು ಹೋದ ಹಾಗೆ ಕಾಣತ್ತೆ."

"ಅದನ್ನ ನೀನೇ ಮಾಡಿಕೊಂಡದ್ದು... ನೀನು ಅವ್ರಿಗೆ ಏನು ಕೊಡ್ತೀ ಅಂತ ಅವರು ನಿನ್ನನ್ನ ಹುಡಕೊಂಡು ಇಲ್ಲಿ ಬರ್ತಾರೆ ಹೇಳು ? ಸತ್ತ ಮೇಲೆ ಸ್ವರ್ಗದಲ್ಲಿ ಅಪ್ಸರೆಯರನ್ನ ತೋರಿಸ್ತೇನೆ. ಅವರ ಕಾಟ ತಡಿಯೊಕ್ಕೆ ಆಗ್ದೇ ಇದ್ರೆ ಮೋಕ್ಷ ಕೊಡ್ತೇನೆ ಅಂದ್ರೆ ಜನಾ ನಂಬತಾರೇ? ಅವ್ರುಗಳಿಗೆ ಬೇಕಾಗಿರೋದು Results-here and now... ಪವಾಡಗಳು".

"ಅಂದ್ರೆ ನಾನೂ ಬಂದೋರಿಗೆಲ್ಲ ಗಾಳಿಯಿಂದ ವಾಚ್ ಮಾಡಿ ಕೊಡಬೇಕೂ ಅಂತೀಯೋನು... ಅಲ್ಲ, ಮಾತಿಗೆ ಹೇಳ್ದೆ, ಅಷ್ಟೆ".

"ನೀನು ವಾಚುಗಳನ್ನ ಮಾಡಿ ಕೊಡ್ತಾ ಇರು, ನಾನೂ ಬಾಗಿಲ ಹತ್ತಿರ ಬೋರ್ಡ್ ತಗಲಿ ಹಾಕ್ತೇನೆ "If you have the inclination, we have the time" ಅಂತ...... ಹೇಳೋದು ನೋಡು...... ಈ ಥರಾ ಎಲ್ಲಾ ಆಗಿಹೋಗ್ದೇ ಇರೋ ಮಾತು. ಅದೋದು ಬಿಟ್ಟು ಯಾವುದಾದ್ರೂ ಬದುಕೋ ಮಾರ್ಗ ನೋಡು."

"Okay, okay ..... ಈ ಊರಲ್ಲಿರೋ Godmen ಗಳಿಗೆ ವ್ಯಾಪಾರಾ ಹಾಳು ಮಾಡಬಾರ್ದೂ ಅಂತ ಇಲ್ಲೀ ತನಕ ಸುಮ್ಮನೇ ಇದ್ದೆ. ಆದ್ರೆ ನನ್ನನ್ನೇ ನಂಬಿಕೊಂಡಿರೋ ನೀನು ಉಪವಾಸಾ ಇರ್ಬೇಕಾದ್ರೆ ನಾನೂ ಅದನ್ನ ತಪ್ಪಿಸೋಕೆ ಏನಾದ್ರೂ ಮಾಡಲೇ ಬೇಕು ಅನ್ನೋದು ನಿಜ... ಸರಿ ನಾನು ಈವತ್ತಿಂದ್ಲೇ ಶುರೂ ಮಾಡ್ತೀನಿ- ಯಾರು ಯಾರು ಇಲ್ಲಿ ಬಂದು ನಮಸ್ಕಾರ ಹಾಕ್ಕೊಂಡು ಹೋಗ್ತಾರೋ, ಅವರುಗಳ ಎದ್ರಿಗೆ ಪ್ರತ್ಯಕ್ಷಾ ಆಗ್ತೇನೆ. ಅಷ್ಟೇ ಅಲ್ಲ, ಅವರ ಮನಸ್ಸಿನಲ್ಲಿರೋ ಒಂದು ಆಸೇ ಕೈಗೂಡೋ ಥರಾ ವರಾನೂ ಕೊಡ್ತೀನಿ... ಆಯಿತಾ ?".

ಅರ್ಚಕರು ಉತ್ತರಾ ಕೊಡಬೇಕೂ ಅನ್ನೋ ಹೊತ್ತಿಗೆ ಏನು ಆಶ್ಚರ್ಯ ಅಂತೀರ. ಮುಂದಿನ ಮಂಗಳವಾರ ನಡೀಬೇಕಾಗಿದ್ದ ಅಸೆಂಬ್ಲಿ Bye-election ನಲ್ಲಿ ರೂಲಿಂಗ್ ಪಾರ್ಟಿ ಅಭ್ಯರ್ಥಿ, ಅವನ ಹಿನ್ನ ಹಿಂದೇನೇ Opposition front ನ ಉಮೇದುವಾರ.– ಮತ್ತೆ ಎರಡು ನಿಮಿಷಾ ಬಿಟ್ಟುಕೊಂಡು ಆ Triangular fight ನಲ್ಲಿದ್ದನಲ್ಲ ಇನ್ನೊಬ್ಬ, ಪಕ್ಷೇತರ, ಮೂರು ಜನಾನೂ ಹಾಜರು– ತೆಂಗಿನ ಕಾಯಿಗಳನ್ನ ಒಡಕೊಂಡು.

ಅರ್ಚಕರಿಗೆ ಮಾತುಕೊಟ್ಟಿದ್ದ ಥರಾನೇ ದೇವರು ಮೂರು ಜನಗಳ ಎದುರಿಗೂ ಪ್ರತ್ಯಕ್ಷ ಆದ :

“ಬೀದೀಲಿ ಹೋಗೋ ದಾಸಯ್ಯಗಳೇ ನನ್ನ ಕಡೆ ತಿರುಗಿ ನೋಡಲ್ಲ ಈ ಕಾಲದಲ್ಲಿ. ಅಂಥದ್ರಲ್ಲಿ ನಾಳೀ ದಿನ ದೇಶ ಆಳೋ ನೀವೆಲ್ಲ ಈವತ್ತು ಇಲ್ಲಿ ಬಂದಿರೋದು ನೋಡಿದ್ರೆ ಸಂತೋಷ ಆಗತ್ತೆ... ಅದಕ್ಕೇ ನಾನು ನಿಮ್ಮೆದುರಿಗೆ ಪ್ರತ್ಯಕ್ಷಾ ಆಗಿರೋದು... ಅಯ್ಯೋ ಇಷ್ಟೇನಾ ಅಂತ ಬೇಜಾರು ಮಾಡ್ಕೋ ಬೇಡಿ. ನೀವು ಇಲ್ಲಿಗೆ ಬಂದದ್ದು ಖಂಡಿತಾ ದಂಡ ಆಗಲ್ಲ... ನಿಮ್ಮ ಮನಸ್ಸಿನಲ್ಲಿ ಯಾವುದು ಒಂದು ದೊಡ್ಡ ಆಸೆ ಇದೆಯೋ, ಅದನ್ನ ಘಟ್ಟಿಯಾಗಿ ಹೇಳಕೋತಾ ಇಡಿಗಾಯಿ ಒಡೀರಿ. ...ನಾನು ಪೂರೈಸಿಕೊಡತೀನಿ”.

Ruling party ನವನು Opposition ನವನ ಕಡೆ ತಿರುಗಿಕೊಂಡು,

“ಈ ನನ್ನ Opponentಗೆ ಒಂದು ಓಟೂ ಬೀಳದೇ ಇರಲಿ ಈ ಎಲಕ್ಷನ್ನಲ್ಲಿ” ಅಂತ ಹೇಳಿ ಕಾಯನ್ನು ಎತ್ತಿ ಕುಕ್ಕಿದ. ಅದು ನೂರು ಚೂರಾಗಿ ಹೋಯಿತು.

ದೇವರು “ತಥಾಸ್ತು” ಅಂದ.

ಇದನ್ನ ನೋಡಿ Opposition candidateಗೆ ಪಿತ್ತ ನೆತ್ತಿಗೆ ಏರಿತು.

“ಈ ಭ್ರಷ್ಟಾಚಾರಿ Ruling party ಯವನಿಗೆ ಡಿಪಾಸಿಟ್ ಎಗರಿ ಹೋಗಲಿ” ಅಂತ ಹೇಳಿಕೊಂಡು, ಅವನೂ ಕಾಯಿ ಒಡೆದ. ದೇವರೂ “ಹಾಗೇ ಆಗಲಿ” ಅಂದ.

ಇನ್ನ ಆ ಪಕ್ಷೇತರ ಅಭ್ಯರ್ಥಿ ? ಅವನೂ ಚೀಲದಿಂದ ಕಾಯನ್ನ ಎತ್ತಿಕೊಂಡ. ಇನ್ನೇನು ಒಡದೇ ಬಿಟ್ಟ ಅನ್ನೋ ಹೊತ್ತಿಗೆ, ಇದ್ದಕ್ಕಿದ್ದ ಹಾಗೇ ನಿಂತುಕೊಂಡ.

"ಮೇಷ್ಟ್ರೆ, ನನಗೊಂದು ಅನುಮಾನ. Ruling party ಯವರು ಏನೋ ಕೇಳ್ಕೊಂಡ್ರಲ್ಲ. ಅದನ್ನು ನೀನು ನಿಜಾ ಮಾಡಿಸ್ತೀಯ ?"

"Definite ಆಗಿ. ಯಾಕೆ ನನ್ನ ಮಾತೂ ನಿಮ್ಮಗಳಪ್ಪ ಥರಾನೇ ಅಂತ ಅನುಮಾನಾನೇ ?"

"ಹಾಗೇನಿಲ್ಲ ... Confirm ಮಾಡಕೊಳ್ಳಕ್ಕೆ ಅಂತ ಕೇಳಿದೆ ಅಷ್ಟೆ... ಅಯ್ತು, ಇನ್ನ Opposition front ನವರು ಕೇಳಿಕೊಂಡ್ರಲ್ಲ ಅದೂ ?..."

"ಅದು ಕೂಡಾ ನೆರವೇರುತ್ತೆ... ನಾನು ಮಾತು ತಪ್ಪೋನಲ್ಲ..."

"ಹಾಗಾದ್ರೆ... ನೀನೇ ಹೇಳೋ ಥರಾ, ಇರೋ ಮೂರು ಜನದಲ್ಲಿ ಒಬ್ಬರಿಗೆ ಡಿಪಾಸಿಟ್ ಹೋಗತ್ತೆ. ಇನ್ನೊಬ್ಬರಿಗೆ ಒಂದು ಓಟೂ ಬೀಳಲ್ಲ... ಅಂದ್ರೆ ಉಳದೋನು ನಾನೊಬ್ಬನೆ... ಈ ಹಾಳೂರಿಗೆ ಗೌಡ. ...ಇನ್ನು ನಾನು ಯಾತಕ್ಕೆ ತೆಂಗಿನಕಾಯಿ ಒಡೀಬೇಕು ನಿನ್ನೆದ್ರಿಗೆ – ಸುಮ್ಮನೇ ದಂಡ. ನಾಳೆ ಮನೇಲಿ ಕೊಬ್ರೀ ಹುಳಿ ಮಾಡಸ್ಕೊಂಡು ತಿಂದ್ರೆ ಆಗಲ್ಲವೆ ?"

ಅಂತ ಹೇಳದೋನೆ ಅದನ್ನ ಮತ್ತೆ ಚೀಲಕ್ಕೆ ತುರಕ್ಕೊಂಡು ಅಲ್ಲಿಂದ ಸೈಡ್ ಬಿಟ್ಟ.

ನೆನೆವುದೆನ್ನ ಮನ

ಹೆದ್ದಾರಿಯಲ್ಲಿ
ಸದ್ದಿಲ್ಲದೆ ಮೈ ಚೆಲ್ಲಿ
ಬಿದ್ದಿರುವ ರೋಡ್ ಹಂಪೆ !

ನಿನ್ನ ಕಂಡ ತಕ್ಷಣ
ನೆನೆವುದೆನ್ನ ಮನ
ಹಾಳು ಹಂಪೆ

ಎಚ್. ಡುಂಡಿರಾಜ್

ಜನಪ್ರಿಯ ವಿಜ್ಞಾನ - ನೀರು

—ಶಿಷ್ಯ

ಪುರಾತನ ಚರಿತ್ರೆ :

ಪಂಚಭೂತಗಳಲ್ಲಿ ಇದು ಎರಡನೆಯದು. ವರುಣದೇವ ಇದಕ್ಕೆ ಅಧಿಪತಿ. ಸಪ್ತ ಸಾಗರಗಳಲ್ಲಿ ಹೇರಳವಾಗಿ ಕಾಣಸಿಗುವ ಈ ಭೂತವನ್ನು ಹಿಂದೊಮ್ಮೆ ದೇವ ದಾನವರು ಮರ್ದಿಸಿದಾಗ ಅನೇಕ ವಿಚಿತ್ರ ವಸ್ತುಗಳು ಹೊರಬಂದುವಂತೆ. ಮಹರ್ಷಿ ಪ್ರೈನ್‌ಬರ್ಗ್ ಅವರ ಪ್ರಕಾರ ಇನ್ನೂರೈವತ್ತುಕೋಟಿ ವರ್ಷಗಳಿಂದ ಸಮುದ್ರಗಳು ಅಸ್ತಿತ್ವದಲ್ಲಿರುವುದರಿಂದ ಸಮುದ್ರ ಮಥನ ಕ್ರಿ. ಪೂ. 217 ಕೋಟಿ ಜನವರಿ ಒಂದರಂದೇ ನಡೆದಿರಬೇಕೆಂದು ತಜ್ಞ ಚರಿತ್ರಕಾರರ ಅನಿಸಿಕೆ.

ಇತ್ತೀಚಿನ ಚರಿತ್ರೆ :

ನೀರನ್ನು ಸಾರ್ವಜನಿಕ ಉಪಯೋಗಕ್ಕೆ ಕಾಲುವೆಗಳಲ್ಲಿ ಹರಿಯ ಬಿಡುವ ಪರಿಪಾಠ ಹರಪ್ಪ, ಮೊಹೆಂಜೊದಾರೊ ಅವಶೇಷಗಳಲ್ಲಿ ಕಾಣಬಹುದು. ಕಲ್ಯಾಣ ನಗರಿಯಾದ ಬೆಂಗಳೂರಿನಲ್ಲಿ ದಿವಾನ್ ಶೇಷಾದ್ರಿ ಐಯರ್ ಅವರು ನೀರು ಸರಬರಾಜಿಗೆ ನೆಲದಲ್ಲಿ ಅಳವಡಿಸಿದ ಕೊಳವೆಗಳು ಇಂದಿಗೂ ಬಳಕೆಯಲ್ಲಿದ್ದು, ತುಕ್ಕು ಹಿಡಿದ ಕೊಳವೆಗಳಿಂದ ನೀರು ಬಿಸರಿ, ಕೊಳವೆ ಹಾಯುವ ಎಡೆಗಳಲ್ಲೆಲ್ಲಾ ಕಾಂಗ್ರೆಸ್ ಹುಲ್ಲು ಸೊಂಪಾಗಿ ಬೆಳೆದಿರುವುದು ಕೊಳವೆಯನ್ನು ಗುರುತಿಸುವುದಕ್ಕೆ ಬಹು ಸಹಕಾರಿಯಾಗಿದೆ.

ಹೊರ ರೂಪ :

ರಸಾಯನ ಶಾಸ್ತ್ರದ ಪ್ರಕಾರ ಇದು ಬಣ್ಣವಿಲ್ಲದ, ಆಕಾರವಿಲ್ಲದ ವಾಸನೆ ಇಲ್ಲದ ದ್ರವ. ಬೆಂಗಳೂರಿನ ನಲ್ಲಿ ನೀರನ್ನು ನೋಡಿರುವವರು ಈ ಸಿದ್ಧಾಂತವನ್ನು ಸುತರಾಂ ಒಪ್ಪುವುದಿಲ್ಲ. ಅವರ ಪ್ರಕಾರ ನೀರು ಕಂದು ಬಣ್ಣದ ದ್ರವವಾಗಿದ್ದು, ಕ್ಲೋರೀನ್ ಅನಿಲದ ವಾಸನೆಯನ್ನು ಹೊಂದಿರುತ್ತದೆ. ವ್ಯಾಸ ಮಹರ್ಷಿ ಅವರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡರೆ, ಗಂಗೆ ಜಲದೇವಿಯ ಅವತಾರ. ಗಂಗೆಯ ರೂಪಕ್ಕೆ ಮರುಳಾದ ಶಂತನು ಮಹಾರಾಜರನ್ನು ಈ ಬಗ್ಗೆ ಪ್ರಶ್ನಿಸಿದಾಗ ಅವರು

"ಗಂಗೆಗೆ ಆಕಾರವಿರುವುದೊಂದೇ ಅಲ್ಲ, ಎಂಥ ಮೋಹಕ ಆಕಾರ !" ಎಂದು ಉದ್ಗರಿಸಿ, ಭಾವಸಮಾಧಿಗಿಳಿದ ಉಲ್ಲೇಖ ಭಾರತದಲ್ಲಿ ಕಂಡುಬರುತ್ತದೆ. ಈ ಬಗ್ಗೆ ಅಂತಿಮ ಇತ್ಯರ್ಥ ಮಾಡುವ ಸದುದ್ದೇಶದಿಂದ ಪ್ರತ್ಯಕ್ಷ ಪ್ರಮಾಣಕ್ಕಾಗಿ ನಾವು ಅಲಸೂರು ಕೆರೆಯನ್ನು ಸಂದರ್ಶಿಸಿ ಬಂದಿದ್ದಾಯಿತು. ನಮ್ಮ ವೀಕ್ಷಣೆಯ ಪ್ರಕಾರ ನೀರಿನ ಬಣ್ಣ ನೀಲಿ. ವಾಸನೆಯ ಬಗ್ಗೆ ಮಿತವಾಗಿ ಹೇಳಿದಷ್ಟೂ ಕ್ಷೇಮ.

ಮೇಲ್ಮೈಲಕ್ಷಣ :

ಆಕಾರವೇ ಇಲ್ಲದ ಮೇಲೆ ಮೇಲ್ಮೈಲಕ್ಷಣ ಎಲ್ಲಿಂದ ಬಂತು ? ಎಂದು ಮುಗೆಳೆಯಬೇಡಿ. ಭೌತಶಾಸ್ತ್ರದ ಪ್ರಕಾರ ನೀರು ಅದನ್ನು ಒಳಗೊಂಡಿರುವ ಪಾತ್ರೆಯ ಆಕಾರವನ್ನು ಪಡೆಯುತ್ತದೆ. ಅಲ್ಲದೆ ಗಾಳಿಗೆ ತಂಪಾಗಿರುವ ನೀರಿನ ಹೊರ ಪದರದಲ್ಲಿ ಒಂದು ವಿಧವಾದ ಬಿಗಿ ಇರುತ್ತದೆ (Surface tension). ಶರೀರ ಶಾಸ್ತ್ರದ ರೀತ್ಯಾ ಮನುಷ್ಯ ದೇಹದ ಶತಾಂಶ 90 ರಷ್ಟು ನೀರಂತೆ. ಈ ವಿಷಯವನ್ನು ನಮ್ಮ ಅಲೆಕ್ಸಿಗೆ ತಿಳಿಸಿದಾಗ, ಶತಾಂಶ 90ರಷ್ಟು ನೀರಿದ್ದರೆ ಏನಂತೆ, ಹೊರಪದರದ ಬಿಗಿ ಎಷ್ಟು ಮನಮೋಹಕ ಎಂದು ಉದ್ಗರಿಸಿದ. ಆ ಸಮಯ ದಲ್ಲಿ ಅವ ಫಿಲ್ಮ್‌ಫೇರ್‌ನಲ್ಲಿ ಶ್ರೀದೇವಿ ಚಿತ್ರ ನೋಡುತ್ತಿದ್ದುದು ಇಲ್ಲಿ ಅಪ್ರಸ್ತುತ.

ವಿವಿಧ ಅವಸ್ಥೆಗಳು :

ನೀರಿಗೆ ಮೂರು ಅವಸ್ಥೆಗಳು. ನೀರ್ಗಲ್ಲು, ನೀರು ಮತ್ತು ಹಬೆ. ವ್ಹಿಸ್ಕಿ, ಬ್ರಾಂದಿ ಮುಂತಾದ ಮದ್ಯಗಳನ್ನು ಕುಡಿಯುವಾಗ ಲೋಟದಲ್ಲಿ ನೀರ್ಗಲ್ಲು ತುಣುಕುಗಳನ್ನು ಹಾಕುವುದು ರೂಢಿ. ಗುಂಡು ಹಾಕುವುದಕ್ಕಾಗಿಯೇ ಮದ್ರಾಸಿ ನಿಂದ ಬೆಂಗಳೂರಿಗೆ ಬರುವ ರಸಿಕರು. 'ನೀರ್ಗಲ್ಲ ಯುಗ ಮತ್ತೆ ಎಂದು ಬರುವುದೋ' ಎಂದು ಉದ್ಗಾರ ತೆಗೆದಾಗಿನಿಂದ ನೀರ್ಗಲ್ಲ ಯುಗ ಎಂಬ ಪ್ರಯೋಗ ಪ್ರಚಲಿತವಾಯಿತು.

ಗುಣಗಳು :

ನೀರು ಯೂನಿವರ್ಸಲ್ ಸಾಲ್ವೆಂಟ್. ಅಂದರೆ ಜಗತ್ತಿನ ಬಹುತೇಕ ವಸ್ತು ಗಳನ್ನು ಕರಗಿಸಿಕೊಳ್ಳಬಲ್ಲದು. ಎಲ್ಲರ ಅನುಭವಕ್ಕೆ ಬಂದಿರುವ 'ಕಣ್ಣೀರು ಕಲ್ಲೆದೆಯನ್ನು ಕರಗಿಸಬಲ್ಲದು' ಎಂಬ ಮಾತು ಇದಕ್ಕೆ ಸಾಕ್ಷಿ. ರಸಾಯನ ಶಾಸ್ತ್ರ

ದಲ್ಲೇ ಅಲ್ಲದೆ ಇನ್ನೂ ಅನೇಕ ಶಾಸ್ತ್ರಗಳಲ್ಲಿ ನೀರು ಉಲ್ಲೇಖವನ್ನು ಪಡೆದಿದೆ. ಕೆಲವು ಉದಾಹರಣೆಗಳನ್ನು ಗಮನಿಸಿ.

ಎದುರಾಳಿಗೆ ನೀರು ಕುಡಿಸಿದರು — ರಾಜಕೀಯ/ರಾಜ್ಯಶಾಸ್ತ್ರ.

ಆ ಯೋಜನೆಗೆ ಎಳ್ಳು, ನೀರು ಬಿಡು. — ಕೈಗಾರಿಕೋದ್ಯಮಿ.

ರಾಜ್ಯದಲ್ಲಿ ಹಣ ನೀರಿನಂತೆ ಖರ್ಚಾಗುತ್ತಿದೆ. — ಅರ್ಥಶಾಸ್ತ್ರಜ್ಞ.

ಪತಿಯ ಮುಖದಿಂದ ನೀರಿಳಿಸಿದಳು. — ಸಮಾಜಶಾಸ್ತ್ರಜ್ಞ,

ಜೀವನ ನೀರ ಮೇಲಣ ಗುಳ್ಳೆ — ದಾರ್ಶನಿಕ

'ನೀರಾಯಿತು' ಎಂದಳು ನಾದಿನಿ ರಾಗವಲಿ. — ?

ಉಪಯೋಗಗಳು :

೧. ಸೋಪಾ ಇಲ್ಲದಾಗ ನೀರು ಬಹು ಉಪಯುಕ್ತ ವಸ್ತು.

೨. ಸಂಗೀತ ಕಾರಂಜಿ ನಡೆಸಬೇಕಾದರೆ ನೀರು ಅತ್ಯಗತ್ಯ.

೩. ಈಜು ಕಲಿಯಬೇಕಾದರೆ ನೀರಿಲ್ಲದೆ ಸಾಧ್ಯವಿಲ್ಲ.

೪. ಜಲವರ್ಣಗಳನ್ನುಪಯೋಗಿಸಿ ಚಿತ್ರ ರಚಿಸಲು ಇದು ಉಪಯೋಗಕರ

೫. ನೀರಿಲ್ಲದೆ ಸಾಬೂನು ಜಾಹಿರಾತು ಕಳೆಗಟ್ಟುವುದಿಲ್ಲ.

೬. ದೋಣಿ ವಿಹಾರಕ್ಕೆ ಅನುಕೂಲ.

೭. ತರ್ಪಣ ಹಾಗೂ ಧರ್ಮೋದಕಗಳಿಗೆ ನೀರು ಅತಿ ಮುಖ್ಯ.

ಕೊರವಂಜಿಯಿಂದ...



ಬಾಲ ಬೋಧೆ

— ಸೂಲಿಬೆಲೆ

ಕನ್ನಡ ಬಾಲಬೋಧೆಯನ್ನು ಕಾಲೇಜಿಗೆ ಪಠ್ಯ ಪುಸ್ತಕವನ್ನಾಗಿ ನಿಯಮಿಸಿ ರೆಂದು ಯಾರಾದರೂ ಸೂಚಿಸಿದರೆ ಅಂದು ಕನ್ನಡ ನಾಡಿನಲ್ಲಿ ಭಾರೀ ಕ್ರಾಂತಿಯಾಗಿ ಹೋದೀತು. ಆ ರೀತಿ ಹೇಳಿದವನನ್ನು ತಡಮಾಡದೆ ಹುಚ್ಚಾಸ್ಪತ್ರೆಗೆ ಸೇರಿಸಿ ಯಾರು, ಕಾಲೇಜು ಹುಡುಗರು ಸುಖದ ದಿನಗಳು ಬಂದವೆಂದು ಕಾಸಿನ ಪೆಪ್ಪರ ಮೆಂಟು ಕೊಂಡು ತಿಂದಾರು. ಆದರೂ ತಾವು ಕೋಪ ತಾಪಗಳಿಗೆ ಎಡೆಕೊಡದೆ ಸಾವಧಾನವಾಗಿ ಒಂದು ಬಾಲಬೋಧೆಯನ್ನು ಕೊಂಡು ತಂದು ನಾಚಿಕೆ ಪಡದೆ ಓದಿ. ಆಗ ಅದರಲ್ಲಿ ಅಡಗಿರುವ ಘನವಾದ ತತ್ವಗಳನ್ನು ನೀವೇ ಮನಗಾಣುವಿರಿ. ಬಾಲಬೋಧೆಯು ಆಗ ನಿಮಗೆ ಭಗವದ್ಗೀತೆಯಾಗಿ ತೋರುವುದು. ಮುಖ್ಯ ಬೇಕಾದುದು ಸಹನೆ. ನಿಮಗೆ ನಂಬಿಕೆ ಬರಲು ಕೆಲವು ಮಾತ್ರ ಉದಾಹರಣೆಗಳನ್ನು ಕೊಡುತ್ತೇನೆ.

“ ಆಗ ಆ ಆಟ — ಈಗ ಈ ಆಟ, ”

ಶ್ರೀ ಶಂಕರಾಚಾರ್ಯರು ಹೇಳಿದರು 'ಬಾಲಸ್ತಾವತ್ ಕ್ರೀಡಾಸಕ್ತಃ ತರುಣ ಸ್ತಾವತ್ ತರುಣೀಸಕ್ತಃ ವೃದ್ಧಸ್ತಾವತ್ ಚಿಂತಾಸಕ್ತಃ ಪರಬ್ರಹ್ಮಣೆ ಕೋಪಿನಸಕ್ತಃ' ಶಂಕರಾಚಾರ್ಯರು ಇಷ್ಟು ಪದಗಳನ್ನು ಅದರಲ್ಲೂ ಸಂಸ್ಕೃತ ಪದಗಳನ್ನು ಖರ್ಚು ಮಾಡಿ ಪಂಡಿತರಿಗೆ ಮಾತ್ರ ವೇದಾಂತವನ್ನು ಉಪದೇಶಿಸಿದರು. ಪಂಡಿತರು 'ಭಲೆ ಭೇಷ್! ಏನು ಹೇಳಿದರಯ್ಯ' ಎಂದು ತಾವೇ ಹೇಳಿದವರಂತೆ ಬೆನ್ನು ಚಪ್ಪರಿಸಿ ಕೊಂಡು ಸುಮ್ಮನಾದರು. ಆದರೆ ಬಾಲಬೋಧೆಯಲ್ಲಿ ಎರಡೇ ಮಾತಿನಲ್ಲಿ ಅದೇ ತತ್ವವನ್ನು ಪಂಡಿತ ಪಾಮರರಿಬ್ಬರಿಗೂ ತಿಳಿಯುವಂತೆ ಎಷ್ಟು ಸುಲಭವಾಗಿ ಅಡಗಿಸಿದ್ದಾರೆ! ಅದೇ ಶಂಕರಾಚಾರ್ಯರು ಸುಲಭವಾಗಿ 'ಆಗ ಆ ಆಟ ಈಗ ಈ ಆಟ' ಎಂದು ಹೇಳಿದ್ದರೆ ಅವರನ್ನು ಹುಚ್ಚು ಸನ್ಯಾಸಿ ಪಟ್ಟಕ್ಕೆ ಸೇರಿಸುತ್ತಿದ್ದರು.

ಯಾವಾಗ ಯಾವ ಆಟವೆಂದು ಮಕ್ಕಳಿಗೆ ಹೇಳಿಕೊಡುವುದರಲ್ಲಿ ಅರ್ಥವಿಲ್ಲ. ಅವರಿಗೆ ಯಾವಾಗಲೂ ಒಂದೇ ಆಟ—ಗೋಲಿ, ಬುಗರಿ, ಇತ್ಯಾದಿ. ಅದನ್ನೇ ಕಾಲೇಜು, ಪ್ರೌಢ ವಿದ್ಯಾರ್ಥಿಗಳಿಗೆ ಹೇಳಿದ್ದರೆ ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಿದ್ದರು. ಮತ್ತು ಸಿನಿಮಾಗಳಿಗೆ ಇನ್ನೂ ಹೆಚ್ಚಾಗಿ ಹೋಗುತ್ತಿದ್ದರು. ಆದರೆ ಅದನ್ನು ಓದಿ ಆ ಪುಸ್ತಕದಲ್ಲಿ ಬರೀ ಆಟಗಳ ವಿಷಯವೇ ಬರೆದಿದ್ದಾರೆಂದು ತಿಳಿಯಬಾರದು. ಹಾಗೆ ಬರೆದಿದ್ದರೆ ಬಹಳ ಜನ ಹುಡುಗರು ವಿದ್ಯಾವಂತರಾಗುತ್ತಿದ್ದರು.

"ಅಪ್ಪ ಬಂದ ಕಬ್ಬು ತಂದ. ಈ ಕಬ್ಬು ಸಪ್ಪೆ."

ಆಹಾ ! ಎಂಥ ರತ್ನದಂತಹ ಮಾತುಗಳಿವು. ಮನೆಬಿಟ್ಟು ಹೊರಗೆ ಹೋದ ಅಪ್ಪನು ಪುನಃ ಸಾಯಂಕಾಲದ ಹೊತ್ತಿಗೆ ಮಿಲಿಟರಿ ಮೋಟರುಗಳು, ಜಟಕಾ ಗಾಡಿಗಳು, ಸಾಲಗಾರರು ಇವರುಗಳಿಂದ ತಪ್ಪಿಸಿಕೊಂಡು ಜೀವಸಹಿತವಾಗಿ ಮನೆ ಸೇರುವುದೇ ಅಪರೂಪ. ಇಂತಹ ಸನ್ನಿವೇಶದಲ್ಲಿ ಅಪ್ಪ ಬಂದರೆ ಎಷ್ಟು ಸಂತೋಷ ವಾಗಲಿಕ್ಕಿಲ್ಲ ! ಅದಕ್ಕೇ ಎಷ್ಟೋ ಜನ 'ಎಲ್ಲಿರುವೆ ತಂದೆ ಬಾರೋ' ಎಂದು ಕೂಗು ವುದು. ಆ ಅಪ್ಪನು ಸುಮ್ಮನೇ ಬರೀ ಕೈ ಆಡಿಸಿಕೊಂಡು ಮನೆಗೆ ಬಂದನೇ ? ಇಲ್ಲ. ಕಬ್ಬು ತಂದನು. ಅಪ್ಪನು ಮನೆಗೆ ಬರುವಾಗ ಬಿದ್ದು ಹೋದ ದೇವಸ್ಥಾನದ ಇಟ್ಟಿಗೆಯನ್ನೋ, ಪಕ್ಕದ ಮನೆಯ ಒಂದು ಹೆಂಚನ್ನೋ ಕದ್ದು ತರಲಿಲ್ಲ. ಬರೀ ಕಬ್ಬು ತಂದನು. ಆದರೆ ಈ ವಾಕ್ಯಗಳಲ್ಲಿ ತುಂಬಿರುವ ಮಹಾ ಸತ್ಯವನ್ನು ನೋಡಿ. ಈ ಕಬ್ಬು ಸಪ್ಪೆ. ಆ ಅಪ್ಪನ ಕುಮಾರರೆಲ್ಲಾ ನುಗ್ಗಿ ನಾ ಮುಂದು ನೀ ಮುಂದು ಎಂದು ಅಪ್ಪನು ತಂದ ಕಬ್ಬನ್ನು ಖಾಲಿ ಮಾಡುವರು. ಕಬ್ಬನ್ನು ತಿಂದು ಧ್ವಂಸ ಮಾಡಿ ಅಪ್ಪನಿಗೆ ಕೊಡುವ ಸರ್ಟಿಫಿಕೇಟ್ 'ಈ ಕಬ್ಬು ಸಪ್ಪೆ'. ಈ ತರಹೆಯ ಸತ್ಯ ವನ್ನು ನುಡಿಯುವ ಧೈರ್ಯ ನಮ್ಮಲ್ಲಿ ಎಷ್ಟು ಜನರಿಗಿದೆ ? ಯಾರ ಮನೆಗಾದರೂ ಊಟಕ್ಕೆ ಹೋದಾಗ ಅಡಿಗೆ ರುಚಿಯಿಲ್ಲದೆ ಹೋದರೂ ಕೂಡ ಧೈರ್ಯವಾಗಿ 'ಈ ಅಡಿಗೆ ಚೆನ್ನಾಗಿಲ್ಲ' ಎಂದು ಹೇಳುವ ಸ್ಥೈರ್ಯ ನಮ್ಮಲ್ಲಿಲ್ಲ. ಉಪನ್ಯಾಸಕಾರರು ನಿಂತು ಸುಳ್ಳಿನ ಕಂತೆಗಳನ್ನು ಉರುಳಿಸುತ್ತಿದ್ದರೂ 'ಇದು ಶುದ್ಧ ಸುಳ್ಳು' ಎಂದು ನುಡಿಯುವ ಗಂಡೆದೆ ನಮಗಿಲ್ಲ. ನಾವು ಹೇಡಿಗಳಾಗುತ್ತಿರುವೆವು. ಆದರೆ ಬಾಲ ಬೋಧೆಯಲ್ಲೇ 'ಈ ಕಬ್ಬು ಸಪ್ಪೆ' ಎಂದು ನಿರ್ದಾಕ್ಷಿಣ್ಯವಾಗಿ ಸತ್ಯದ ಮೊದಲು ಪಾಠವನ್ನು ನಮಗೆ ಹೇಳಿಕೊಡುತ್ತಿದ್ದರೂ ನಮ್ಮ ಲಕ್ಷ್ಯವು ಅತ್ತ ಹರಿದಿಲ್ಲ. ತಾಯಿ ತಂದೆ ಯಾರಾಗಲೀ ಸತ್ಯದ ಮುಂದೆ ಅವರ ಶಕ್ತಿಗುಂದುವುದು. ಅದಕ್ಕಾಗಿಯೇ ಆ ಸಪ್ಪೆ ಕಬ್ಬನ್ನು ತಂದವನು ಅಪ್ಪನೆಂದು ಆರೋಪಿಸಿದ್ದಾರೆ. ಇಂತಹ ವಿಚಾರ ಪರಿಪ್ಲುತ ಪುಸ್ತಕವನ್ನು ಸುಳ್ಳು ಅರಿಯದ ಬಾಲಕರಿಂದ ಓದಿಸಿ ಏನು ಪ್ರಯೋಜನ ? ಕಾಲೇಜು ಹುಡುಗರಿಂದ ಓದಿಸಿದರೆ ಅವರಿಗೆ ಧೈರ್ಯವಾಗಿ ಸತ್ಯವನ್ನು ನುಡಿಯುವ

ಒಂದು ತತ್ವವನ್ನು ಉಪದೇಶಿಸಿದಂತಾಗುವುದು. ದೇಶದ ಪ್ರಗತಿವೃದ್ಧಿಗೆ ಸಹಾಯ ಮಾಡಿದಂತಾಗುವುದು. ಈ ತತ್ವದ ಸಾರವನ್ನೇ ಮಹಾತ್ಮರು ಜಗತ್ತಿಗೇ ಸಾರಿ ಹೇಳುತ್ತಿರುವರು. ಪಠ್ಯ ಪುಸ್ತಕ ಕಮಿಟಿಯವರು ಈ ಕಡೆ ಗಮನ ಕೊಡುವರೆ?

"ಅಯ್ಯಾ, ಕಾಯಿ ಪಲ್ಯ ತಂದೆಯಾ? ಜಗಳವಾಡಬೇಡ, ಅಗೋ ಅಲ್ಲಿ ಒಂದು ನಕ್ಷತ್ರ."

ಮನೆಯವನೊಬ್ಬನನ್ನು ತರಕಾರಿ ತರಲು ಮಾರ್ಕೆಟ್ಟಿಗೆ ಕಳುಹಿಸಿರುವರು. ಅವನು ಬಹಳ ಹೊತ್ತಿನ ಮೇಲೆ ಮನೆಗೆ ವಾಪ್ಸು ಬಂದಿರುವನು. ನೋಡಿದರೆ ಬರೀ ಕೈಲಿ ಬಂದ ಹಾಗೆ ಕಾಣಿಸುತ್ತಿದೆ. ಕೊಟ್ಟ ದುಡ್ಡು ಸಹಾ ತಿಂದು ಹಾಕಿರಬಹುದು. ಮಾತನ್ನಾಡಿಸಿದರೆ ಮೇಲೆ ಬೀಳುವುದಕ್ಕೆ ಬರುತ್ತಾನೆ. ಇಕ್ಕಟ್ಟಿನ ಸನ್ನಿವೇಶ. ಈಗ ಅವನಿಂದ ಏಟು ತಿನ್ನದೆ, ಮೆಲ್ಲನೆ ದುಡ್ಡು ಹೇಗೆ ಹಾಳು ಮಾಡಿದ್ದಾನೆ ಎಂಬ ವಿಷಯ ಗ್ರಹಣ ಮಾಡಬೇಕು. ನಮ್ಮ ನಿಮ್ಮಿಂದ ಅದು ಸಾಧ್ಯವೇ ? ನಾವೇನಾದರೂ ಲೋ ಪೋಕರಿ, ತರಕಾರಿ ತೆಗೆದುಕೊಂಡು ಬಾ ಎಂದು ದುಡ್ಡು ಕೊಟ್ಟರೆ ಮಸಾಲೆ ದೋಸೆ ತಿಂದು ಬರೀ ಕೈಲಿ ಬಂದಿದ್ದೀಯೋ ಪಾಪಿ ಎಂದೆವೋ, ನಮ್ಮ ಒಂದು ಅವಯವವನ್ನು ಅವನು ಊನ ಮಾಡುತ್ತಾನೆ. ಆದರೆ ಬಾಲಬೋಧೆಯಲ್ಲೇ ಮುಂದೆ ಅಂತಹ ಸನ್ನಿವೇಶಗಳು ಉದ್ಭವಿಸಬಹುದು ಎಂದು ಆ ಸಮಸ್ಯಾ ಪರಿಹಾರವನ್ನೂ ಸುಲಭವಾಗಿ ಸೂಚಿಸಿದ್ದಾರೆ. 'ಅಯ್ಯಾ, ಕಾಯಿ ಪಲ್ಯ ತಂದೆಯಾ?' ಎಂದು ನೋಡಿದರೂ ನೋಡದಿದ್ದ ಹಾಗೆ ಕೇಳಬೇಕು. ಗೊತ್ತೇ ಇದೆ ಅವನು ಜಗಳಕ್ಕೆ ಬರುತ್ತಾನೆ. ಆಗ ಮೃದುವಾಗಿ ಹೇಳಬೇಕು : 'ಜಗಳವಾಡಬೇಡ. ಅಗೋ ಅಲ್ಲಿ ಒಂದು ನಕ್ಷತ್ರ. ಆಗ ಅದು ಹೀಗೆ ಹೇಳಿದ ಹಾಗಾಗುತ್ತದೆ. ಅಪ್ಪಾ, ಈ ಪ್ರಪಂಚವು ನಮಗೆ ಶಾಶ್ವತವಲ್ಲ. ನಾನೂ ನೀನೂ ಎಲ್ಲರೂ ಒಂದು ದಿನ ಸಾಯಬೇಕು. ಸತ್ತ ಮೇಲೆ ಆ ರೀತಿ ನಕ್ಷತ್ರಗಳಾಗಿ ಪ್ರಕಾಶಿಸುವೆವು. ಆದುದರಿಂದ ಸುಮ್ಮನೆ ಜಗಳವಾಡಿ ಇಹಪರಗಳನ್ನು ಯಾತಕ್ಕೆ ಹಾಳು ಮಾಡಿಕೊಳ್ಳುತ್ತೀಯೆ ? ಸುಮ್ಮನೆ ಒಳ್ಳೆಯ ಮಾತುಗಳಲ್ಲಿ ದುಡ್ಡನ್ನು ಇಂತಿಂಥಾ ಪದಾರ್ಥಗಳಿಗೆ ಉಪಯೋಗಿಸಿದೆ ಎಂದು ಹೇಳಿದರೆ ಸಾಕು. ಸುಮ್ಮನೆ ಜಗಳವಾಡಿ, ಹೊಡೆದಾಡಿ, ಇಬ್ಬರೂ ಸತ್ತು, ಈಗಲೇ ನಕ್ಷತ್ರಗಳಾಗುವುದು ಬೇಡ' ಎಂದು ಅಹಿಂಸಾ ಮಾರ್ಗದರ್ಶನ ಮಾಡುವುದು ಉತ್ತಮ, ಇಂತಹ ಸನ್ನಿವೇಶಗಳನ್ನು ಪ್ರತಿ ದಿನವೂ ಎದುರಿಸಬೇಕಾದ ಪ್ರೌಢ ವಿದ್ಯಾರ್ಥಿಗಳು ಈ ಬಾಲಬೋಧೆಯನ್ನು ಓದುವುದನ್ನು ಬಿಟ್ಟು ಚಿಕ್ಕ ಮಕ್ಕಳು ಓದಿ ಏನು ತಿಳಿದುಕೊಂಡಾರು ? ಓದುಗರೇ ! ನೀವಾದರೂ ಈ ವಿಷಯದಲ್ಲಿ ಚಳುವಳಿ ಹೂಡಬಾರದೇ ?


" ಅವನು ಒಬ್ಬ ಮನುಷ್ಯ. ಇದು ಒಂದು ಕತ್ತೆ. "

ಎಂತಹ ಘನವಾದ ತತ್ವವನ್ನು ಪ್ರತಿಪಾದಿಸುವ ಸೊಗಸಾದ ವಾಕ್ಯಗಳಿವು ! ಈಗಲೂ ಎಷ್ಟೋ ಘನ ವಿದ್ವಾಂಸರಿಗೆ ಮನುಷ್ಯ ಮತ್ತು ಕತ್ತೆಯಲ್ಲಿ ವ್ಯತ್ಯಾಸ ಗೊತ್ತಿಲ್ಲ. ಎಷ್ಟೋ ಸಲ ಅವರು ತಮ್ಮ ಮಕ್ಕಳನ್ನೇ 'ಕತ್ತೆ, ಇದು ಯಾಕೋ ಹೀಗೆ ಮಾಡಿದೆ' ಎಂದು ಕೇಳುತ್ತಾರೆ. ಆದರೆ ಬಾಲಬೋಧೆಯಲ್ಲಿ ಬಹಳ ಸುಲಭವಾಗಿ ಇಂತಹವನೇ ಮನುಷ್ಯ, ಇಂತಹದೇ ಕತ್ತೆ ಎಂದು ತಿಳಿಹೇಳಿದ್ದಾರೆ. ಮನುಷ್ಯರಲ್ಲೇ ಎಷ್ಟೋ ಸಲ ನಮಗೆ ಕತ್ತೆಯ ಮಾದರಿಗಳು ಕಂಡು ಬರುವುವು. ಜೀವ ರಾಶಿಗಳ ವ್ಯತ್ಯಾಸಗಳನ್ನು ಸಹ ಕೇವಲ ಚಿಕ್ಕ ಬಾಲಬೋಧೆಯಲ್ಲೇ ಹೇಳಿಕೊಡುವಾಗ ನಾವು ಸುಮ್ಮನೆ ದಪ್ಪ ಪುಸ್ತಕಗಳನ್ನು ಓದಿ ಅರ್ಥ ಮಾಡಿಕೊಳ್ಳದೆ ತಲೆಕೆಡಿಸಿ ಕೊಳ್ಳುವ ಉದ್ದೇಶವಾದರೂ ಏನು ?

ಅಣ್ಣಗಳಿರಾ ! ನಾನು ಹೆಚ್ಚು ಹೇಳಲು ಬಯಸುವುದಿಲ್ಲ. ಬಾಲಬೋಧೆಯ ಪ್ರತಿಯೊಂದು ಮಾತಿನಲ್ಲೂ, ಪದದಲ್ಲೂ ಸಹ ಘನವಾದ ತತ್ವಗಳನ್ನೂ, ಗೂಢಾರ್ಥಗಳನ್ನೂ ಅಡಗಿಸಿರುವಾಗ ಪ್ರತಿ ದಿನವೂ ನಾವು ಭಗವದ್ಗೀತೆಯ ಬದಲಾಗಿ ಬಾಲಬೋಧೆಯನ್ನೇ ಯಾಕೆ ಪಾರಾಯಣ ಮಾಡಬಾರದು ? ವಿಶ್ವವಿದ್ಯಾನಿಲಯಗಳಲ್ಲಿ ಡಾಂಟೆ, ಕಾಂಟ್ ಇವರ ಪುಸ್ತಕಗಳ ಜಾಗದಲ್ಲಿ ಸುಲಭ ಬೆಲೆಗೆ ಸಿಕ್ಕುವ ಬಾಲಬೋಧೆಯನ್ನು ಯಾತಕ್ಕೆ ಪಠ್ಯ ಪುಸ್ತಕವಾಗಿ ನಿಯಮಿಸಬಾರದು ? ಭಾರತವರ್ಷದ ಮನೆಮನೆಗಳಲ್ಲಿ ಬಾಲಬೋಧೆಯು ಆಯಾ ಭಾಷೆಗಳಲ್ಲಿ ಸರ್ವರಿಂದ ಪಠಿತವಾಗಿ, ನಮಗೆ ಸ್ವರಾಜ್ಯದ ದಾರಿಯನ್ನು ಬಹಳ ಹತ್ತಿರದಲ್ಲೇ ತೋರಿಸಲೆಂದು ನಾನು ದೇವರನ್ನು ಪ್ರಾರ್ಥಿಸುತ್ತೇನೆ. ಭಗವಂತನು ನಿಮಗೂ ಸದಾ ಬಾಲಬೋಧೆಯನು ಓದುವ ಸದ್ಬುದ್ಧಿಯನ್ನಿತ್ತು, ಆಯುಸ್ಸು ಕೊಟ್ಟು ಕಾಪಾಡಲಿ.

ಸಾರ್ವಜನಿಕ ಸಾಲವಾದರೂ, ತೀರಸಬೇಕಾದ್ದು

ಖಾಸಗೀ ತೆರಿಗೆದಾರರೇ ಅಲ್ಲವೆ ?



ಪೃಥ್ವೀವಲ್ಲಭರು

— ಜಿ.ಎಸ್.ಜಿ.

— ೨ —

ಗೊಂದಲಪುರದ ಸ್ವಾಹಾರಾಜನ ಕಥೆ

ಛಪ್ಪನ್ನೈವತ್ತಾರು ದೇಶಗಳ ಚಕ್ರವರ್ತಿ ಚಂದ್ರಶೀಲನು ತನ್ನ ಅಂಗರಕ್ಷಕರಿಂದಲೇ ಹತನಾದಾಗ ಚಕ್ರಾಧಿಪತ್ಯದ ಸಾಮಂತರು ಸ್ವತಂತ್ರರಾಗಿ ಚಕ್ರಾಧಿಪತ್ಯವು ಅತಂತ್ರವಾಗುತ್ತದೆ ಎಂದು ಜನ ಭಾವಿಸುತ್ತಿದ್ದಾಗ, ಅಮಾತ್ಯರುಗಳು ಗುಪ್ತ ಸಭೆ ಸೇರಿ ಚಂದ್ರಶೀಲನ ಮಗನನ್ನು ಚಕ್ರವರ್ತಿ ಎಂದು ರಾತ್ರೋ ರಾತ್ರಿ ಘೋಷಿಸಿ ಚಕ್ರಾಧಿಪತ್ಯವನ್ನು ಉಳಿಸಿದರು.

ಇದರಲ್ಲಿ ಅಮಾತ್ಯರ ಸ್ವಾರ್ಥವೂ ಇಲ್ಲದಿರಲಿಲ್ಲ. ಚಂದ್ರಶೀಲನ ಮಗ ರಾಜಶೇಖರನು ಅನೇಕ ವರ್ಷಗಳು ರಾಷ್ಟ್ರದಲ್ಲಿರದೇ ಅಲ್ಲಿಲ್ಲಿ ಸಂಚರಿಸುತ್ತಾ ಐಶರಾಮ ಜೀವನದಲ್ಲಿ ಕಾಲ ಕಳೆಯುತ್ತಿದ್ದರೂ ಸಂಭಾವಿತ ಮುಗ್ಧನೆಂದು ಹೆಸರಾಗಿದ್ದನು. ರಾಜಶೇಖರನನ್ನು ತಮ್ಮ ತಾಳಕ್ಕೆ ಕುಣಿಸಬಹುದೆಂಬ ಅಮಾತ್ಯರ ಎಣಿಕೆಯಲ್ಲಿ ತಪ್ಪೇನೂ ಇರಲಿಲ್ಲ. ಇದು ಬೇರೆಯ ಕಥೆ.

ಸಾಮಂತ ರಾಜ್ಯಗಳಲ್ಲಿ ಗೊಂದಲಪುರವೂ ಒಂದು. ಗೊಂದಲಪುರದ ರಾಜ ಅವಸರವರ್ಮ ತನ್ನ ದೂರದೃಷ್ಟಿ ಇಲ್ಲದ ಕಾರ್ಯಗಳಿಂದ, ಮುಂಗೋಪದಿಂದ ತನ್ನ ಜನರ ಜನರ ಅಸಹನೆಗೆ ಪಾತ್ರನಾಗಿದ್ದನು. ಅವಸರವರ್ಮ ಅಹಂಭಾವದಿಂದ ಚಕ್ರವರ್ತಿ ರಾಜಶೇಖರನನ್ನು ಗೌರವಿಸುತ್ತಿರಲಿಲ್ಲ. ಇದರಿಂದ ಚಕ್ರವರ್ತಿಯ ಅವಕೃಪೆಗೆ ಪಾತ್ರನಾಗಬೇಕಾಯಿತು. ಈ ಕಾರಣಗಳಿಂದ ಅವಸರವರ್ಮನು ಸಿಂಹಾಸನವನ್ನು ಕಳೆದು ಕೊಳ್ಳಬೇಕಾಯಿತು. ಗೊಂದಲಪುರದ ಸಿಂಹಾಸನ ಬರಿದಾಯಿತು.

ಚಕ್ರವರ್ತಿ ರಾಜಶೇಖರನು ತನ್ನ ನಂಬುಗೆಯವರನ್ನು ಗೊಂದಲಪುರದ ಸಿಂಹಾಸನದಲ್ಲಿ ಕೂರಿಸಲು ಅಸಮರ್ಥನಾದನು. ಇದಕ್ಕೆ ರಾಜಮನೆತನದ ಒಳಜಗಳಗಳು ಒಂದು ಕಾರಣವಾದರೆ ಹಿಂದಿನ ಚಕ್ರವರ್ತಿ ಚಂದ್ರಶೀಲನ ಕಾಲದಲ್ಲಿ ಗೊಂದಲಪುರದ ರಾಜನಾಗಿದ್ದ ಐರಾವತ ವರ್ಮನಿಗೂ ಚಂದ್ರಶೀಲ ಚಕ್ರವರ್ತಿಗೂ ಬೆಳೆದಿದ್ದ ಮನಸ್ತಾಪವೂ ಕಾರಣವಾಗಿದ್ದಿತು.

ಗೊಂದಲಪುರದ ಬಹು ಹಿಂದಿನ ರಾಜ ವೃದ್ಧಕ್ಷತ್ರನ ಪಾಳಯ ನೇಪಥ್ಯದಲ್ಲಿ ಕಾಯುತ್ತಿತ್ತು. ಅದು ಬಯಲಿಗೆ ಬರಲು ಅವಕಾಶವಾಯಿತು. ವೃದ್ಧಕ್ಷತ್ರನಿಗೆ ವಯಸ್ಸಾಗಿದ್ದರೂ ತನ್ನವರನ್ನೇ ರಾಜರನ್ನಾಗಿ ಮಾಡುವ ಬಯಕೆ ಇದ್ದಿತು. ತನ್ನ ಕಾಲದಲ್ಲಿ ಗೊಂದಲಪುರ ರಾಜ್ಯವನ್ನು ವಿಸ್ತರಿಸಿ, ಅಭಿವೃದ್ಧಿಪಡಿಸಿದ ಕೀರ್ತಿ ವೃದ್ಧ ಕ್ಷತ್ರನದಾಗಿದ್ದಿತು. ಆದರ ಕಲ್ಯಾಣದಲ್ಲಿ ಆಸಕ್ತಿ ಅಳಿಸಿರಲಿಲ್ಲ. ಅವನ ಕಾಲದಲ್ಲಿ ಸ್ವಜನ ಪಕ್ಷಪಾತಿ ಎಂದು ಅಪಕೀರ್ತಿ ಪಡೆದಿದ್ದರೂ, ಜನರ ಸಹಾನುಭೂತಿಯನ್ನು ಹೊಂದಿದ್ದನು. ಹಿಂದೆ ರಾಜನಾಗಿದ್ದಾಗ ಅವನ ಆಪ್ತ ಇಬ್ಬರು ಅಮಾತ್ಯರಲ್ಲಿ ಸ್ವಾಹಾಕುಮಾರನೂ ಒಬ್ಬ. ಇನ್ನೊಬ್ಬ ದೇವೇಂದ್ರವರ್ಮ. ದೇವೇಂದ್ರವರ್ಮನು ಬಹು ಹಿಂದೆಯೇ ಚಂದ್ರಶೀಲ ಚಕ್ರವರ್ತಿಯ ಪಾಳಯವನ್ನು ಸೇರಿ, ಅಮಾತ್ಯನಾಗಿ ಬಿಟ್ಟಿದ್ದ. ರಾಜಶೇಖರನ ಪಾಳಯದಲ್ಲಿಯೂ ಮುಂದುವರೆದಿದ್ದ.

ಸ್ವಾಹಾಕುಮಾರನು ರಾಜನಾದರೆ ಗೊಂದಲಪುರಕ್ಕೆ ಒಳ್ಳೆಯದಾಗುವುದೆಂಬ ನಂಬಿಕೆ ವೃದ್ಧಕ್ಷತ್ರನಿಗೆ. ಆದರೆ ಸ್ವಾಹಾಕುಮಾರನು ಗೊಂದಲಪುರದ ಸಂಪರ್ಕವನ್ನೇ ಬಿಟ್ಟಿದ್ದನು. ಆದರೂ ಜನರಲ್ಲಿ ಅವನ ಮೇಲೆ ಅಭಿಮಾನವಿದ್ದಿತು. ಅವನಿಗೂ ಒಳಗೊಳಗೆ ಆಸೆ ಇತ್ತು.

ವೃದ್ಧಕ್ಷತ್ರನಿಗೆ ನೇರವಾಗಿ ಸ್ವಾಹಾಕುಮಾರನನ್ನು ರಾಜನನ್ನಾಗಿ ಮಾಡಲು ಬರುವಂತಿರಲಿಲ್ಲ, ಅವನ ಗುಂಪಿನ, ಬಹು ಜನರ ಸಮ್ಮತಿ ಇರಲಿಲ್ಲ. ಅದಕ್ಕಾಗಿ ಪಟ್ಟದಾನೆಯ ಸೊಂಡಿಲಿಗೆ ಮಾಲೆಯನ್ನು ಹಾಕಿ ಅದು ಯಾರ ಕೊರಳಿಗೆ ಮಾಲೆಯನ್ನು ಹಾಕುವುದೋ, ಅವನೇ ರಾಜನಾಗಬೇಕೆಂಬ ತೀರ್ಮಾನವಾಯಿತು. ಸ್ವಾಹಾಕುಮಾರನೂ, ವೃದ್ಧಕ್ಷತ್ರನೂ ಮಾವಟಿಗನನ್ನು ಗುಟ್ಟಾಗಿ ಸಂಧಿಸಿ, ತನ್ನ ಕಡೆಗೆ ಒಲೈಸಿಕೊಂಡಿದ್ದರಂತೆ ಅಂತೂ ಸ್ವಾಹಾಕುಮಾರ ಗೊಂದಲಪುರದ ಸ್ವಾಹಾ ರಾಜನಾದ.

*   *   *   *

ಸ್ವಾಹಾರಾಜನು ಬಲು ಚತುರ. ನಿಸ್ವಾರ್ಥದ ಅವಗುಂಠನದಲ್ಲಿ ಸ್ವಾರ್ಥವನ್ನು ಸಾಧಿಸಬಲ್ಲವ. ಗೊಂದಲಪುರದ ಗದ್ದುಗೆಯಲ್ಲಿದ್ದುಕೊಂಡೇ ಚಕ್ರವರ್ತಿಯಾಗುವ ಬಯಕೆ. ಉಳಿದ ಸಾಮಂತರನ್ನು ತನ್ನೆಡೆಗೆ ಸೆಳೆದುಕೊಳ್ಳುವ ಹಂಚಿಕೆ. ಈ ಗೊಂದಲದಲ್ಲಿ ಗೊಂದಲಪುರದ ಆಡಳಿತ ಅಸ್ತವ್ಯಸ್ತ.

ಸ್ವಾಹಾರಾಜನಿಗೆ ಚಕ್ರವರ್ತಿ ರಾಜಶೇಖರನ ಗುಂಪಿನವರ ವಿರೋಧವನ್ನು ದಮನ ಮಾಡುವುದರೊಳಗೆ ಸ್ವಜನರಿಂದಲೂ ಉಂಟಾಗುತ್ತಿದ್ದ ಕಿರುಕುಳವನ್ನು

ನಿವಾರಿಸುವುದೂ ಸಮಸ್ಯೆಯಾಗಿದ್ದಿತು. ಪ್ರಾರಂಭದಲ್ಲಿ ಅತಿ ಜಾಣತನದಿಂದ ಪ್ರಬಲ ವಿರೋಧಿ ಕನಕವರ್ಮನನ್ನು ಅತೋಃ ಭ್ರಷ್ಟ, ತತೋಃ ಭ್ರಷ್ಟನನ್ನಾಗಿ ಮಾಡುವುದರಲ್ಲಿ ಸಮರ್ಥನಾದನು.

ಸ್ವಾಹಾರಾಜನು ಪ್ರಜಾವತ್ಸಲನೆಂದು ಜನಪ್ರಿಯನಾಗಲು ಅನೇಕ ಯೋಜನೆಗಳನ್ನು ಜಾರಿಗೆ ತಂದನು. ರಾಜ್ಯದಲ್ಲಿ ತನ್ನವರೇ ಆದ ಸ್ಥಾನಿಕ ಅಧಿಪತಿಗಳನ್ನು ನೇಮಿಸಿದನು. ಪ್ರಜೆಗಳಿಗೆ ಧನ, ಕನಕ, ಗೃಹ, ವಸ್ತ್ರ ವಾಹನಾದಿಗಳನ್ನು ಮುಫತ್ತಾಗಿ ಕೊಡಿಸಿದನು. ಛತ್ರಗಳನ್ನು ಕಟ್ಟಿಸಿದನು. ಕುಳಿತು ತಿನ್ನುವವರಿಗೆ ಬೇಕಾದಷ್ಟು ಅನುಕೂಲ ಮಾಡಿಕೊಟ್ಟನು. ಇದರ ಮುಖವಾಡದ ಹಿಂದೆ ತನ್ನ ಪ್ರಾಬಲ್ಯವನ್ನು ಬೆಳಸಿಕೊಳ್ಳಲು ಹಣ ಸಂಗ್ರಹಿಸಿದನು. ಜನರನ್ನು ಸಾಕಿದನು. ಗೊಂದಪುರದ ಖಜಾನೆ ಖಾಲಿ ಆಯಿತು. ಉತ್ಪನ್ನ ಶೂನ್ಯವಾಯಿತು. ರಾಜನು ರಾಜ್ಯದ ಬೊಕ್ಕಸವನ್ನು ಬರಿದು ಮಾಡಿ ಬೇರೆಡೆಗೆ ಸಾಗಿಸುತ್ತಿದ್ದಾನೆಂಬ ಹೊಗೆ ಹರಡಲು ಪ್ರಾರಂಭವಾಯಿತು. ಹೊಗೆ ಬೆಂಕಿಯಾಗಿ ಹಬ್ಬಿಕೊಳ್ಳಲು, ಸ್ವಾಹಾರಾಜನ ಅಮಾತ್ಯರಲ್ಲಿ ಪ್ರಬಲ ಹಿತ ಶತ್ರು ಇಂದ್ರಗುಪ್ತನು ಗಾಳ ಹಾಕಲು ಉದ್ಯುಕ್ತನಾದನು.

ಸ್ವಾಹಾರಾಜನು ಚೆಂದುರಂಗದಾಟದಲ್ಲಿ ನಿಪುಣ. ಒಳ್ಳೆಯ ಸಮಯ ನೋಡಿಕೊಂಡು ತನ್ನನ್ನು ಬಗೆಯು ನಂದಿವರ್ಮನನ್ನು ರಾಜನನ್ನಾಗಿ ಮಾಡಿ, ತಾನು ಸಿಂಹಾಸನ ತ್ಯಾಗ ಮಾಡಿದರೂ ತನ್ನ ಹಿರಿತನವನ್ನು ಉಳಿಸಿಕೊಂಡನು. ಇಂದ್ರಗುಪ್ತನು ತಾನೇ ಅಮಾತ್ಯ ಪದವಿಯನ್ನು ಬಿಡುವಂತೆ ನಂದಿವರ್ಮನ ಮೂಲಕ ಸನ್ನಾಹ ಮಾಡಿ, ಜಯಶೀಲನಾದನು.

ಇಂದ್ರಗುಪ್ತನು ಹೆಡೆ ತುಳಿದ ಹಾವಾದನು. ತನ್ನ ಪರಿವಾರದಿಂದ ಸ್ವಾಹಾರಾಜನ ತೇಜೋವಧೆಯಲ್ಲಿ ತೊಡಗಿದನು. ಜನಗಳು ದಂಗೆ ಏಳುವಂತೆ ಮಾಡಲು ಪ್ರಯತ್ನಿಸಿದನು.

ಇಷ್ಟಾದರೂ ಸ್ವಾಹಾರಾಜನ ಪ್ರತಿಷ್ಠೆ ಚಕ್ರಾಧಿಪತ್ಯದಲ್ಲಿ ಹರಡಲು ಸಾಕಷ್ಟು ಅವಕಾಶಗಳ ನಿರ್ಮಾಣವಾಯಿತು. ಇದರಲ್ಲಿ ಚಕ್ರವರ್ತಿ ರಾಜಶೇಖರನ ದೌರ್ಬಲ್ಯವೂ ಇಲ್ಲದಿರಲಿಲ್ಲ.

ಗೊಂದಲಪುರದ ಹೊಸ ರಾಜ ತನ್ನ ರಾಜತ್ವವನ್ನು ಜನರು ಒಪ್ಪಿಕೊಳ್ಳುವಂತೆ ಮಾಡಲು ಅಹರ್ನಿಶಿ ಪ್ರಯತ್ನಗಳನ್ನು ಮಾಡಿದರೂ ಸ್ವಾಹಾರಾಜನ ಛಾಯೆಯಲ್ಲಿಯೇ ಇರಬೇಕಾಯಿತು.

ಚಕ್ರವರ್ತಿ ರಾಜಶೇಖರನು ಈ ಸಮಯದಲ್ಲಿ ಗೊಂದಲಪುರದ ರಾಜನನ್ನಾಗಿ ಮಾಡಲು ತನ್ನವರನ್ನು ಹುಡುಕುತ್ತಿದ್ದನು. ಆದರೆ ಸ್ವಾಹಾರಾಜನು ರಾಜಶೇಖರನನ್ನೇ ಚಕ್ರವರ್ತಿ ಸ್ಥಾನದಿಂದ ಇಳಿಸಲು ಸನ್ನಾಹ ಮಾಡುತ್ತಿದ್ದನು.

ಈ ರಾಜಕೀಯ ಚದುರಂಗದಾಟದಲ್ಲಿ ಸತ್ತ ಬಡ ಪ್ಯಾದೆಗಳು ಗೊಂದಲಪುರದ ಜನರು. ಗೊಂದಲಪುರದಲ್ಲಿ ಅರಾಜಕತೆ ತಾಂಡವವಾಡಿತು. ಅಧಿಕಾರಿಗಳು ಭ್ರಷ್ಟಸ್ವೇಚ್ಛಾಚಾರಿಗಳಾದರು. ಸ್ಥಾನಿಕರು ತಮ್ಮದೇ ಪ್ರವೃತ್ತಿ ಬೆಳೆಸಿಕೊಂಡರು. ಬುದ್ಧಿಜೀವಿಗಳು ಪಲಾಯನ ಮಾಡಿದರು. ರಾಜ್ಯ ದೇವರಿಲ್ಲದ ಗುಡಿ ಆಯಿತು ಬೊಕ್ಕಸ ಎಂದೋ ಬರಿದಾಗಿತ್ತು. ಎಲ್ಲೆಲ್ಲೂ ಕೊಲೆ, ಸುಲಿಗೆ, ಭ್ರಷ್ಟಾಚಾರದ ನಗ್ನ ನೃತ್ಯ. ನೆಮ್ಮದಿಯ ನಾಡಾಗಿದ್ದ ಗೊಂದಲಪುರ ಗೊಂದಲಗಳ ಗೊಂಡಾರಣ್ಯ ಆಯಿತು.

ವೃದ್ಧ ಕ್ಷತ್ರನು ತನ್ನ ಇಳಿವಯಸ್ಸಿನಲ್ಲಿ ತನ್ನವರೆಂದು ನಂಬಿದವರಿಂದಲೇ ನಾಡಿಗೆ ಬಂದೊದಗಿದ ಅನರ್ಥವನ್ನು ಕಂಡು ಪರಿತಪಿಸಿ, ಪರಿತಪಿಸಿ ಕಣ್ಣು ಮುಚ್ಚಿದನು.

ಗೊಂದಲಪುರದ ಸ್ಥಿತಿಯೇ ಇತರ ಸಾಮಂತ ರಾಜ್ಯಗಳಿಗೂ ಬಂದೊದಗಿತು. ಚಕ್ರಾಧಿಪತ್ಯದಲ್ಲಿ ಮಹಾಕ್ರಾಂತಿಯೊಂದು ನಡೆಯಿತು. ಚಕ್ರಾಧಿಪತ್ಯ ಕ್ರಾಂತಿಗೆ ಬಲಿಯಾಗಿ ಪರರ ಸೊತ್ತಾಯಿತು.

ಇತ್ತ ಗೊಂದಲಪುರವು ಇತಿಹಾಸದಲ್ಲಿ ಒಂದು ಕಹಿ ನೆನಪಾಗಿ ಉಳಿಯಿತು. ಸ್ವಾಹಾರಾಜನನ್ನು ಜನ ಮರೆಯಲಿಲ್ಲ. ಜನ್ಮಾಂತರಗಳವರೆಗೆ ಅವನ ನೆನಪು ಅವರನ್ನು ಕಾಡಿತು.

ರಾಜಕಾರಣಿ :— ಚುನಾವಣೆಗೆ ಮುಂಚೆ ನಿಮ್ಮ ಕೈಕುಲುಕಿ

ಚುನಾವಣೆಯ ನಂತರ ನಿಮ್ಮ ನಂಬಿಕೆ ಕುಲುಕುವವ

ಆನೆ ಮೇಲೆ ಹಾರ್ಸು ಕುದುರೆ !

— ಜಿ. ಎಂ. ನಾಗರಾಜ

ಇಂಗ್ಲಿಷ್ 'ಗಟ್ಟಿ' ಮಾಡಲು ಪ್ರಶಸ್ತವಾದ ಬೆಳಗಿನ ಜಾವಕ್ಕೆ ಯಥಾ ಪ್ರಕಾರ ತಿಪ್ಪ ಎದ್ದಿದ್ದಾನೆ. ಮಾಸ್ಟರು ಹೇಳಿಕೊಟ್ಟ ಶಬ್ದಾರ್ಥಗಳನ್ನು ಗಟ್ಟಿ ಮಾಡಲುಪಕ್ರಮಿಸಿದ್ದಾನೆ. ಹೀಗೆ :

On ಅಂದ್ರೆ ಮೇಲೆ House ಅಂದ್ರೆ ಕುದುರೆ

On ಅಂದ್ರೆ ಮೇಲೆ House ಅಂದ್ರೆ ಕುದುರೆ

On ಅಂದ್ರೆ ಮೇಲೆ House ಅಂದ್ರೆ ಕುದುರೆ

'ಟೆಂಪೊ' ಜಾಸ್ತಿ ಆದ ಹಾಗೆಲ್ಲಾ ('ಅಂದ್ರೆ' ಬಿಟ್ಟು ಹೋಗಿ)

On ಮೇಲೆ Horse ಕುದ್ರೆ

On ಮೇಲೆ Horse ಕುದ್ರೆ

On ಮೇಲೆ Horse ಕುದ್ರೆ

ಹಾಗೇ ಗಟ್ಟಿ ಮಾಡುವ 'ಟೆಂಪೊ' ಕ್ಲೈಮ್ಯಾಕ್ಸ್ ಮುಟ್ಟುತ್ತಾ ಆದದ್ದು ಹೀಗೆ :

ಆನ್ ಮೇಲೆ ಹಾರ್ಸ್ ಕುದ್ರೆ

ಆನ್ ಮೇಲೆ ಹಾರ್ಸ್ ಕುದ್ರೆ

....

ಆನೆ ಮೇಲೆ ಹಾರ್ಸು ಕುದ್ರೆ ? !

ಆನೆ ಮೇಲೆ ಹಾರ್ಸ್ನ ಕುದ್ರೆ !!

ಆನೆ ಮೇಲೆ ಹಾರ್ಸ್ನ ಕುದ್ರೆ !!!

ಮನೆಮುಂದಿಗೆಲ್ಲಾ ಒಂದು ಕಡೆ ಆಶ್ಚರ್ಯ, ಇನ್ನೊಂದು ಕಡೆ ಗಾಬರಿ. ಬೆಳ್ ಬೆಳಗ್ಗೇನೆ ಇದೇನು ಆನೆ ಮೇಲೆ ಕುದ್ರನೆ ಹಾರ್ಸ್ನೋದು ? ಅಥವಾ ತಿಪ್ಪ ಓದಿ ಓದಿ ಮರುಳಾದ ಕೂಚು ಭಟ್ಟನಾದನೆ ?

ಎಲ್ಲ ರೂಮಿಗೆ ನುಗ್ಗಿ ನೋಡಿದರೆ ತಿಪ್ಪು ಕಣ್ಣು ಮುಚ್ಚಿ ಧ್ಯಾನ ಮಗ್ನ ಋಷಿಯಂತೆ ಒಂದೇ ಸಮ

ಆನೆ ಮೇಲೆ ಹಾರ್ಸ್ನ ಕುದುರೆ '

ಅಂತ ಜಪಿಸುತ್ತಿದ್ದಾನೆ !

ಕೊನೆಗೆ ಅಪ್ಪನ ಕೈಗೆ ಬೆತ್ತ ಬರುವ ಮೊದಲೇ ಅಮ್ಮನ ಅಲುಗಿಸುವಿಕೆಯಿಂದ ಎಚ್ಚೆತ್ತ ತಿಪ್ಪುವಿನ ಬಾಯಿಂದ ಈ 'ಗಟ್ಟಿ' ಮಾಡುವ ವಿಧಾನ ಕೇಳಿದಾಗ ಎಲ್ಲರಿಗೂ ನಗು !!

ಉಪದೇಶ

ಧೂಮಪಾನ
ಒಳ್ಳೇದಲ್ಲ
ಅಂತೀರಲ್ಲ ಮೇಷ್ಟ್ರೇ
ಹಾಗಾದರೆ
ನಿಮಗೆ ಯಾಕೆ
ಇಷ್ಟು ದೊಡ್ಡ Ash tray ?-

ಎಚ್. ಹಂಪಿರಾಜ್

ಓದುಗರ ಅಭಿರುಚಿ - ಒಂದು ಸರ್ವೆ

ಅಪರಂಜಿಯ ಓದುಗರ. ಅಭಿರುಚಿ, ಅಭಿಪ್ರಾಯ ಸಂಗ್ರಹಣೆಗಾಗಿ ಈ ಬಾರಿ ಸರ್ವೆ ಒಂದನ್ನು ನಡೆಸಲು ತೀರ್ಮಾನಿಸಿದ್ದೇವೆ. ಇದಕ್ಕೆ ಓದುಗರೆಲ್ಲರ ಸಹಕಾರ ಅತ್ಯಗತ್ಯ. ನೀವು ಮಾಡಬೇಕಾದದ್ದು ಇಷ್ಟೆ,

(೧) ಈ ಸಂಚಿಕೆಯಲ್ಲಿನ ಎಲ್ಲ ಬರಹಗಳನ್ನು ಓದಬೇಕು.
(ಯಾವ ಜನ್ಮದ ಪಾಪ... ಸಾಲು ಜ್ಞಾಪಕಕ್ಕೆ ಬರುತ್ತೆ ಅಲ್ವೇ !)

(೨) ಕೆಳಗೆ ನೀಡಿರುವ ಪಟ್ಟಿಯಲ್ಲಿ ಎಲ್ಲ ಲೇಖನಗಳ ಹೆಸರುಗಳನ್ನು ಕೊಟ್ಟಿದೆ. ಹೆಸರಿನ ಮುಂದೆ ಒಂದರಿಂದ ಹತ್ತರವರೆಗಿನ ಸಂಖ್ಯೆಗಳನ್ನು ಸೂಚಿಸಿದೆ. ಒಂದು ಎಂದರೆ ತೀರಾ ಕಳಪೆ, ಹತ್ತು ಅತೀ ಸ್ವಾರಸ್ಯಕರ ಹಾಗೂ ಹಾಸ್ಯಮಯ. ಈ ಅಳತೆಗೋಲನ್ನು ಉಪಯೋಗಿಸಿ ಲೇಖನದ ಸ್ವಾರಸ್ಯದ ಮೌಲ್ಯಮಾಪನ ಮಾಡಿ. ನಿಮಗೆ ಸರಿ ತೋರಿದ ಸಂಖ್ಯೆಯ ಸುತ್ತ ಒಂದು ಸೊನ್ನೆ ಸುತ್ತಿ. (ಉದಾಹರಣೆಗೆ:- ಒಂದು ಲೇಖನದ ಸ್ವಾರಸ್ಯ ಮಟ್ಟವನ್ನು ನೀವು 7 ಎಂದು ನಿರ್ಧರಿಸಿದರೆ ಆ ಸಂಖ್ಯೆಯ ಸುತ್ತು ಈ ರೀತಿ (7) ಗುರುತಿಸಿ)

(೩) ಎಲ್ಲ ಬರಹಗಳನ್ನೂ ಈ ರೀತಿ ಮೌಲ್ಯ ಮಾಪನ ಮಾಡಿದ ನಂತರ ಮುಂದಿನ ಪುಟವನ್ನು ಹರಿದು, ಒಂದು ಲಕ್ಕೋಟೆಯೊಳಗಿಟ್ಟು, ಅಂಚೆ ಮೂಲಕ ನಮಗೆ ರವಾನಿಸಿ.

(೪) ಮನೆಯಲ್ಲಿನ ಇತರರೂ ಭಾಗವಹಿಸಲು ಆಶಿಸಿದರೆ, ಈ ಪುಟದ ನಕಲುಗಳನ್ನು ಮಾಡಿ, ಅವರುಗಳೂ ತಮ್ಮ ಅಭಿಪ್ರಾಯವನ್ನು ಅಗತ್ಯವಾಗಿ ತಿಳಿಸಬಹುದು,

ಓದುಗರ ಪ್ರತಿಕ್ರಿಯೆ ಅಭಿರುಚಿಗಳನ್ನು ಗಮನಿಸಿ, ಮುಂದಿನ ಸಂಚಿಕೆಗಳನ್ನು ಉತ್ತಮ ಪಡಿಸಲು ಯತ್ನಿಸುತ್ತೇವೆ.

(೧) ಉದ್ಯೋಗ ತೃಪ್ತಿ :
1 2 3 4 5 6 7 8 9 10

(೨) ದಂತ ಕಥೆ :
1 2 3 4 5 6 7 8 9 10

(೩) ಬೆಂಗಳೂರು ಇಂದು
1 2 3 4 5 6 7 8 9 10

(೪) ಪೃಥ್ವೀವಲ್ಲಭರು :
1 2 3 4 5 6 7 8 9 10

(೫) ಯಾರು, ಯಾರಿಗೆ ಹೇಳಿದರು :
1 2 3 4 5 6 7 8 9 10

(೬) ಜನಪ್ರಿಯ ವಿಜ್ಞಾನ – ನೀರು :
1 2 3 4 5 6 7 8 9 10

(೭) ಯಶಸ್ವೀ ದಾಂಪತ್ಯ :
1 2 3 4 5 6 7 8 9 10

(೮) ಓರೆಕೋರೆ ಕನ್ನಡಿ :
1 2 3 4 5 6 7 8 9 10


(೯) ಕಳ್ಳ ಮತ್ತು ಮುಖ್ಯ ಮಂತ್ರಿ :
1 2 3 4 5 6 7 8 9 10

(೧೦) ವರವ ಪಡೆದವರು :
1 2 3 4 5 6 7 8 9 10

(೧೧) ಬಾಲ ಭೋದೆ :
1 2 3 4 5 6 7 8 9 10


(೧೨) ಅಪರಂಜಿ ಕಿಡಿ :
1 2 3 4 5 6 7 8 9 10

(೧೩) ಆನೆ ಮೋಟಿ ಹಾರ್ಸ್ ಕುದುರೆ ;
1 2 3 4 5 6 7 8 9 10



REGISTERED No. BGW-180


ಶುಭಾಶಯಗಳೊಂದಿಗೆ



ಟರ್ನ್-ಕೀ ಕನ್‌ಸ್ಟ್ರಕ್ಷನ್ಸ್ (ಪ್ರೈ) ಲಿಮಿಟೆಡ್

11ನೇ ಮೇನ್ ರಸ್ತೆ
ಮಲ್ಲೇಶ್ವರಂ
ಬೆಂಗಳೂರು-560 003

ಫೋನ್ : 364118



Printed by V. R. NATH for the Publisher M. SHIVA KUMAR. Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVA KUMAR.